MYSORE LEGISLATIVE ASSEMBLY

Tuesday, 4th July 1967.

The House met in the Assembly Chamber, Vidhana Soudha, Bangalore, at Nine of the Clock.

MR. SPEAKER [SRI B. VAIKUNTA BALIGA, B.A., B.L.] in the Chair.

BUDGET ESTIMATES FOR 1967-68

General Discussion

(Debate Continued)

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು ಮತ್ತು ಯೋಜನೆ ಶಾಖೆಗಳ ಮಂತ್ರಿಯವರು).— ಮಾನ್ಯ ಅಧ್ಯಕ್ಷರೇ, ನಾನು 1967-68ನೇ ವರ್ಷದ ಬಗ್ಗೆ ಮುಂಗಡ ಪತ್ರವನ್ನು ಸಭೆಯ ಮುಂದೆ ಇಟ್ಟಾಗ ಪರಿಸ್ಥಿತಿ, ಮುಖ್ಯವಾಗಿ ಆರ್ಥಿಕ ಪರಿಸ್ಥಿತಿ ಬಹುಮಟ್ಟಿಗೆ ಅನಿಶ್ಚಿತ ಸ್ವರೂಪದ್ದಾಗಿತ್ತು. ಮಾನ್ಯ ಸದಸ್ಯರು ತಿಳಿದಿರುವ ಹಾಗೆ ಸಾರ್ವತ್ರಿಕ ಚುನಾವಣೆಗಳು ಮುಗಿದ ಮೇಲೆ ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಮತ್ತು ಕೇಂದ್ರದಲ್ಲೂ ತಾತ್ಕಾಲಿಕ ಮುಂಗಡ ಪತ್ರವನ್ನು ಆಯಾಯ ಶಾಸನ ಸಭೆ ಮತ್ತು ಪಾರ್ಲಿಮೆಂಟಿಗೆ ಒಪ್ಪಿಸಿದರು. ಆದರೆ ನಾವು ತಾತ್ಕಾಲಿಕ ಮುಂಗಡಪತ್ರವನ್ನು ಈ ಸಭೆಯ ಮುಂದೆ ಇಟ್ಟಿರಲಿಲ್ಲ. ನನ್ನ ಅಭಿಪ್ರಾಯದಲ್ಲಿ ತಾತ್ಕಾಲಿಕ ಮುಂಗಡ ಪತ್ರ, ಮುಂಗಡ ಪತ್ರವೇ ಅಲ್ಲ. ಆದರೂ ಪರಿಸ್ಥಿತಿ ಅನಿಶ್ಚಿತ ಇರುವಾಗ ಅದರಲ್ಲೂ ಕೇಂದ್ರದ ಮುಂಗಡ ಪತ್ರ ಪಾರ್ಲಿಮೆಂಟ್ ಮುಂದೆ ಇನ್ನೂ ಬರದೇ ಇದ್ದಾಗ ನಮ್ಮ ಮುಂಗಡ ಪತ್ರದ ಮೇಲೆ ಚರ್ಚೆ ಮಾಡುವುದು ಅಷ್ಟೊಂದು ಸರಿಯಾಗಲಿಕ್ಕಿಲ್ಲ ಎಂದು ತಿಳಿದು ಕಳೆದ ಸಲ ನಾವು ಅಧಿವೇಶನವನ್ನು ಮೊಟಕು ಮಾಡಿದೆವು, ಅದರ ಬಗ್ಗೆ ವಿಪುಲವಾದ ಚರ್ಚೆ ಆಯಿತು. ಅದರ ಬಗ್ಗೆ ಇಲ್ಲಿ ನಾನು ಪುನಃ ಪ್ರಸ್ತಾಪಿಸುವುದಕ್ಕೆ ಬಯಸುವುದಿಲ್ಲ. ಆದರೆ ಸುದೈವದಿಂದ ನಮ್ಮ ಮುಂಗಡ ಪತ್ರ ಯಾವ ಯಾವ ಆಶೋತ್ತರಗಳನ್ನು ಇಟ್ಟುಕೊಂಡು, ಯಾವ ಯಾವ ಅಂಕಿ ಸಂಖ್ಯೆಗಳ ಆಧಾರದ ಮೇಲೆ ತಯಾರಾಗಿತ್ತೋ ಆ ಆಶೋತ್ತರಗಳಲ್ಲಿ ಮತ್ತು ಅಂಕಿಸಂಖ್ಯೆಗಳಲ್ಲಿ ವಿಶೇಷವಾದಂತಹ ಬದಲಾವಣೆ ಆಗಲಿಲ್ಲ. ಇದನ್ನೂ ಕೂಡ ನಾನು ಸ್ವಲ್ಪದರಲ್ಲಿ ಮುಂಗಡ ಪತ್ರದ ಮೇಲೆ ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲನೆಯದಾಗಿ ಹೇಳಿದ್ದೇನೆ. ಚರ್ಚೆ ಬಹಳ ಸುದೀರ್ಘವಾಗಿ ನಡೆದಿದೆ. ಬಹುಶಃ ಇಷ್ಟು ಸುದೀರ್ಘವಾಗಿ ಮುಂಗಡ ಪತ್ರದ ಮೇಲೆ ಈ ಶಾಸನ ಸಭೆಯಲ್ಲಿ ಚರ್ಚೆ ನಡೆದಿರಲಿಲ್ಲ, ಈ ಚರ್ಚೆಯ ಕಾಲದಲ್ಲಿ ಅನೇಕ ಸದಸ್ಯರು ಮುಂಗಡಪತ್ರವನ್ನು ಶ್ಲಾಘಿಸಿದ್ದಾರೆ ಮತ್ತು ಇನ್ನು ಕೆಲವು ಜನ ಸದಸ್ಯರು ಅದನ್ನು ಟೀಕೆ ಮಾಡಿದ್ದಾರೆ. ಈ ಶ್ಲಾಘನೆ ಮತ್ತು ಟೀಕೆ ಎರಡಕ್ಕೂ ನಾನು ಮೊದಲೇ ತಯಾರಾಗಿದ್ದೆ. ಟೀಕೆ ಕೇವಲ ವಸ್ತುನಿಷ್ಠ ಆದಂಥ ಟೀಕೆಯಾದರೆ ಅದರಿಂದ ಪ್ರಯೋಜನ ಇದೆ; ಮತ್ತು ಅದನ್ನು ನಾನು ತುಂಬಾ ಸ್ವಾಗತಿಸುತ್ತೇನೆ. ಆದರೆ ಟೀಕೆ ವ್ಯಕ್ತಿನಿಷ್ಠ ಆದಂಥ ಟೀಕೆಯಾದರೆ ಅದು ಅಷ್ಟೊಂದು ಗಟ್ಟಿಯಾದಂಥ ಟೀಕೆ ಅಲ್ಲ, ಟೊಳ್ಳು ಆದಂಥ ಟೀಕೆ ಎಂದು ಹೇಳಲು ಬಯಸುತ್ತೇನೆ. ಈ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ಸರ್ಕಾರದ ನೀತಿ, ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತು ನಮ್ಮ ಪಂಚವಾರ್ಷಿಕ ಯೋಜನೆಗಳ ಕಾರ್ಯಕ್ರಮದಲ್ಲಿ ನಾವು ಈಗಾಗಲೇ ತೆಗೆದುಕೊಂಡಂಥ ಕಾರ್ಯಕ್ರಮದಲ್ಲಿ ಮಾಡಿದಂಥ ಸಾಧನೆ ಮತ್ತು ಮುಂದೆ ಮಾಡಬೇಕಾದಂಥ ಕಾರ್ಯಕ್ರಮ ಇವುಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಬಹುಶಃ ಚರ್ಚೆ ಈಗ ಆಗಿರುವುದಕ್ಕಿಂತ ಹೆಚ್ಚು ಉಪಯುಕ್ತವಾಗಬಹುದಾಗಿತ್ತು ಎಂದು ನನಗೆ ಅನಿಸುತ್ತದೆ. ಆದರೆ ಚರ್ಚೆಯ ವೇಗದಲ್ಲಿ ಅನೇಕ ರೀತಿಯ ಮಾತುಗಳು ಬರುತ್ತವೆ ಮತ್ತು ಬಹುಶಃ ಒಂದೇ ರೀತಿಯಲ್ಲಿ ಹೋಗಬೇಕು ಎಂದು ಹೇಳಿದರೂ ಅದು ಸಾಧ್ಯವಾಗಲಿಕ್ಕಿಲ್ಲ, ನನಗೆ ಸ್ವಲ್ಪಮಟ್ಟಿಗೆ ನಿರಾಶೆ ಏಕೆ

(ಶ್ರೀ ರಾಮಕೃಷ್ಣ ಹೆಗಡೆ)

ಆಯಿತು ಎಂದರೆ, ಇಂದು ಇಡೀ ದೇಶದ ಆರ್ಥಿಕ ಸ್ಥಿತಿ ಬಹಳ ಮುಗ್ಗಟ್ಟಿನಲ್ಲಿದೆ, ಅದರಂತೆ ನಮ್ಮ ಮೈಸೂರು ರಾಜ್ಯದ ಆರ್ಥಿಕಸ್ಥಿತಿಯೂ ಕೂಡ ಅದಕ್ಕೆ ಒಂದು ಅಪವಾದವಲ್ಲ. ಈ ಪರಿಸ್ಥಿತಿಯಲ್ಲಿ ಈ ಒಂದು ಬಿಕ್ಕಟ್ಟನ್ನು ಯಾವ ರೀತಿ ನಾವು ಬಗೆಹರಿಸಬೇಕು ಎಂಬುದನ್ನು ಹೇಳುವುದರ ಬಗ್ಗೆ ಸದಸ್ಯರಿಂದ ವೈಧಾನಿಕವಾದಂಥ ಕನ್‌ಸ್ಟ್ರಕ್ಟೀವ್ ಆದಂಥ ಸೂಚನೆಗಳು ನಾನು ನಿರೀಕ್ಷೆ ಮಾಡಿದಷ್ಟು ಬರಲಿಲ್ಲ. ಈ ಆರ್ಥಿಕ ಪರಿಸ್ಥಿತಿ ಇಂದು ನಮ್ಮ ಮುಂದೆ ಏನಿದೆ ಇದು ಏತಕ್ಕೆ ಹೀಗಾಯ್ತು, ಯಾರಿಂದ ಹೀಗಾಯ್ತು ಅನ್ನುವುದು ಅಷ್ಟೊಂದು ಪ್ರಶಸ್ತವಾದ ವಿಷಯ ಅಂತ ಹೇಳುವುದಕ್ಕಾಗುವುದಿಲ್ಲ. ಇಂದಿನ ಆರ್ಥಿಕ ಮುಗ್ಗಟ್ಟಿಗೆ ಅನೇಕ ಕಾರಣಗಳಿವೆ. ಆದಾಗ್ಯೂ ವಿರೋಧ ಪಕ್ಷಗಳ ಮಾನ್ಯ ಸದಸ್ಯರುಗಳು ತಮ್ಮ ಒಬ್ಬೊಬ್ಬರ ಮಾತಿನಲ್ಲೂ ಈ ಮುಗ್ಗಟ್ಟಿಗೆಲ್ಲಾ ಕಾರಣ ಕಳೆದ 20 ವರ್ಷಗಳಿಂದಲೂ ದೇಶದಲ್ಲಿ ನಡೆಯುತ್ತಿರುವ ಕಾಂಗ್ರೆಸಿನ ದುರಾಡಳಿತವೇ ಎಂಬುದಾಗಿ ಪದೇ ಪದೇ ಅವರು ಹೇಳುತ್ತಿದ್ದಾರೆ. ಕಾಂಗ್ರೆಸ್ಸು ಕಳೆದ 20 ವರ್ಷಗಳಿಂದ ದೇಶದ ಆಡಳಿತ ಜವಾಬ್ದಾರಿಯನ್ನು ವಹಿಸಿದ್ದು ಅದು ಒಂದು ಆಕಸ್ಮಿಕ ಘಟನೆ. ಆದರೆ ಈ ಕಾಂಗ್ರೆಸ್ ಹುಟ್ಟುವ ಕಾಲಕ್ಕೆ ದೇಶಕ್ಕೆ ಇಷ್ಟು ಬೇಗ ಸ್ವಾತಂತ್ರ್ಯ ಬರುತ್ತೆ, ಅದು ದೇಶದ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ಅದು ತಿಳಿದಿದ್ದಿಲ್ಲ, ಅದಕ್ಕೆ ಈ ವಿಚಾರವೂ ಗೊತ್ತಿರಲಿಲ್ಲ. ಈ ಸಂಸ್ಥೆ ಕಳೆದ 20 ವರ್ಷಗಳಿಂದ ದೇಶದ ಆಡಳಿತವನ್ನು ವಹಿಸಿಕೊಂಡು ಅದರ ಬಗ್ಗೆ ನನಗೆ ಬಹಳ ಅಭಿಮಾನವಿದೆ. ಅದು ಇಲ್ಲಿಯವರೆಗೂ ಮಾಡಿರತಕ್ಕ ಕೆಲಸಗಳ ಬಗ್ಗೆಯೂ ನನಗೆ ಬಹಳ ಅಭಿಮಾನವಿದೆ. ಆದರೆ ನಾನು ಕಳೆದ 20 ವರ್ಷಗಳಿಂದಲೂ ಕಾಂಗ್ರೆಸ್ ಸರ್ಕಾರ ನಡೆಸಿರತಕ್ಕ ಕೆಲಸಗಳೆಲ್ಲಾ ಯಶಸ್ವಿಯಾಗಿವೆ ಎಂದು ಹೇಳಲಾರೆ. ಇದು ನಡೆದ ದಾರಿಯಲ್ಲಿ ನಾವು ಎದುರಿಸಬೇಕಾಗಿ ಬಂದ ಮುಗ್ಗಟ್ಟು ಮತ್ತು ಸಮಸ್ಯೆಗಳನ್ನೂ ನೋಡಿದರೆ ಈ ಆಡಳಿತಕ್ಕೆ ಬೇರೆ ಯಾವ ಪಾರ್ಟಿ ಕೈ ಹಾಕಿದ್ದರೂ ಕೆಲಸಗಳು ಇಷ್ಟು ಯಶಸ್ವಿಯಾಗಿ ಆಗುತ್ತಿರಲಿಲ್ಲ ಎಂದು ಹೇಳಬಯಸುತ್ತೇನೆ. ಆದರೆ ಈ ದಿವಸ ನಾವು ನೋಡುತ್ತಿರುವ ಮುಗ್ಗಟ್ಟೇನಿದೆ ಇದು ಕಳೆದ 5-6 ವರ್ಷಗಳಿಂದಲೂ ಅನೇಕ ಸಮಸ್ಯೆಗಳು ಒಟ್ಟಾಗಿ ಸೇರಿದುದರಿಂದ ಈ ಪರಿಣಾಮ ನಮಗೆ ಕಾಣುತ್ತಿದೆ. ಆದುದರಿಂದ ನಾನು ಪ್ರಪ್ರಥಮವಾಗಿ ಆರ್ಥಿಕ ಮುಗ್ಗಟ್ಟಿಗೆ ಕಾರಣಗಳೇನೆಂಬುದನ್ನು ಸ್ವಲ್ಪ ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ. ಈ ದಿವಸ ನಮ್ಮ ಬಡ್ಜೆಟ್ಟೇನಿದೆ ಅದರ ಹಿನ್ನೆಲೆಯನ್ನು ನೋಡಿ ನಾವು ಚರ್ಚೆ ಮಾಡಬೇಕು. ಅದರ ಹೊರತು ಪ್ರತ್ಯೇಕವಾಗಿ ಇದರ ಚರ್ಚೆ ಮಾಡಿದರೆ, ವೀಕ್ಷಿಸಿದರೆ ಅದು ಸರಿ ಹೋಗಲಿಕ್ಕಿಲ್ಲ ಎಂದು ನನ್ನ ಅಭಿಪ್ರಾಯ. ದೇಶದ ಆರ್ಥಿಕ ಮುಗ್ಗಟ್ಟಿಗೆ ಮುಖ್ಯವಾದ ಕಾರಣಗಳು ಮೂರು ಇವೆ. (1) ಎಲ್ಲಾ ಪದಾರ್ಥಗಳ ಬೆಲೆಗಳೂ ವಿಪರೀತವಾಗಿ ಏರುತ್ತಿವೆ, (2) ಆಹಾರ ಪರಿಸ್ಥಿತಿಯು ಅತ್ಯುತ್ಕಟ ಪರಿಸ್ಥಿತಿಗೇರಿದೆ ಮತ್ತು ಮೂರನೆಯದಾಗಿ ವಿದೇಶಿ ವಿನಿಮಯವನ್ನು ನಾವು ಎಷ್ಟು ಗಳಿಸಬೇಕಾಗಿತ್ತೋ ಅಷ್ಟನ್ನು ಗಳಿಸುವುದಕ್ಕೆ ಆಗದೆ ಇದ್ದುದು, ಇದೆಲ್ಲವೂ ಒಟ್ಟುಗೂಡಿದ್ದರಿಂದ ನಮ್ಮ ಆರ್ಥಿಕ ಪರಿಸ್ಥಿತಿಯ ಮೇಲೆ ಈ ಪರಿಣಾಮ ಉಂಟಾಯಿತು. ನಾವೇನು ಮೊದಲು ಮೂರನೆ ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡಿದ್ದೆವೋ ಆ ಯೋಜನೆಗಳ ಬಹು ಭಾಗದ ಹಣವನ್ನು ಡಿಫಿಸಿಟ್ ಫೈನಾನ್ಸಿನ ಮೂಲಕ ಒದಗಿಸಬೇಕಾಗಿ ಬಂತು, ಈ ದಿವಸ ವಿರೋಧಪಕ್ಷದಲ್ಲೂ ಅನೇಕ ಅರ್ಥಿಕ ತಜ್ಞರಿದ್ದಾರೆ. ಡಿಫಿಸಿಟ್ ಫೈನಾನ್ಸಿನ ಒಂದು ಘೋರ ಪರಿಣಾಮವೇನೆಂಬುದನ್ನು ತಿಳಿಸಿದರೆ ಅದು ಅಪ್ರಕೃತವಾಗಲಾರದು. ಡಿಫಿಸಿಟ್ ಫೈನಾನ್ಸ್ ಎಂದರೆ, ಹೆಚ್ಚಿಗೆ ನೋಟುಗಳನ್ನು ಮುದ್ರಣಮಾಡುವುದು. ಹೀಗೆ ಮಾಡುವುದರಿಂದ ಹಣದ ಬೆಲೆ ಕಡಮೆಯಾಗುತ್ತದೆ, ಪದಾರ್ಥಗಳ ಬೆಲೆ ಹೆಚ್ಚಾಗುತ್ತದೆ. ಆರ್ಥಿಕ ರಂಗದಲ್ಲಿ ಬಹಳ ಅಪರೂಪವಾಗಿ ಪ್ರಯೋಗ ಮಾಡತಕ್ಕ ಆಯುಧ ಎಂದರೆ ಅದು ಡಿಫಿಸಿಟ್ ಫೈನಾನ್ಸ್. ಯಾವಾಗ ನಾವು ಕ್ಷಿಪ್ರವಾಗಿ ಫಲಕೊಡತಕ್ಕ ಯೋಜನೆಗಳನ್ನು ಕೈಗೊಳ್ಳುತ್ತೇವೋ ಆಗಮಾತ್ರ ನಮ್ಮಲ್ಲಿ ಸಾಕಷ್ಟು ಹಣವಿಲ್ಲದಿದ್ದರೆ ಇದನ್ನು ಉಪಯೋಗ ಮಾಡಬೇಕು. ಈ ವರ್ಷ ನಮಗೆ ಹಣದ ಕೊರತೆಯಿದ್ದರೂ ನಮ್ಮ ಯೋಜನೆಗಳು ಒಂದೆರಡು ವರ್ಷಗಳಲ್ಲಿ ಇವು ಉತ್ಪಾದನೆಯ ಮೂಲಕ ಕ್ಷಿಪ್ರವಾಗಿ ಫಲಕೊಡತಕ್ಕವುಗಳಾಗಿದ್ದರೆ, ಅಂಥಾ ಸಾಧ್ಯತೆಯಿದ್ದರೆ ಸರಿ, ಇಲ್ಲವಾದರೆ ಇದು ದೇಶದ ಮೇಲೂ ಜನರ ಮೇಲೂ ಒಳ್ಳೆಯ ಪರಿಣಾಮವನ್ನು ಬೀರುವುದಿಲ್ಲ. ಇದು ಬಹಳ ಮುಖ್ಯವಾದ ಕಾರಣ. ಇನ್ನು ಎರಡನೆಯದಾಗಿ ಹೇಳುವುದೇನಂದರೆ-1962 ರಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಗೊತ್ತಿರುವಹಾಗೆ ಚೈನಾ ಧಾಳಿ ನಮ್ಮ ದೇಶದ ಮೇಲೆ ಆಯಿತು. ಪುನಃ 1964 ರಲ್ಲಿ ಪಾಕಿಸ್ಥಾನದ ಆಕ್ರಮಣ ನಮ್ಮ ದೇಶದ ಮೇಲೆ ಆಯಿತು. ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಮತ್ತು ಗೌರವಗಳನ್ನು ರಕ್ಷಣೆ ಮಾಡಬೇಕಾದ್ದು ನಮೆಲ್ಲರ ಪ್ರಥಮ ಕರ್ತವ್ಯ. ಇದಕ್ಕಾಗಿ ನಮ್ಮ ಕೇಂದ್ರ ಸರ್ಕಾರ ಅನಿರೀಕ್ಷಿತವಾಗಿ ಅಪಾರ ಹಣವನ್ನು ಖರ್ಚುಮಾಡಬೇಕಾಗಿ ಬಂದಿತು. ಇದೆಲ್ಲವೂ ನಮ್ಮ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ,

ನೆನಪಿದೆ; ಮತ್ತು ಇದರ ಜೊತೆಗೆ ಮೂರು ವರ್ಷಗಳ ಕಾಲ ಸತತವಾಗಿ ಮಳೆ ಇಲ್ಲದೆ ಬೆಳೆ ನಮ್ಮ ಕೈಗೆ ಸಿಕ್ಕಲಿಲ್ಲ. ನಾವು ಈ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಆರ್ಥಿಕ ವಿಶ್ಲೇಷಣವನ್ನು ಮಾಡುವಾಗ, ಮಾತನಾಡುವುದು ಒಳ್ಳೆಯದೆಂದು ನಾನು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಇಂಥಾ ಒಂದು ಪರಿಸ್ಥಿತಿ ಬೇರೆ ಇನ್ನು ಯಾವ ದೇಶದಲ್ಲಿದ್ದರೂ, ಅಲ್ಲಿ ಯಾವ ಪಾರ್ಟಿ ಸರ್ಕಾರ ಕೆಲಸ ಮಾಡುತ್ತಿದ್ದರೂ ಪರಿಣಾಮ ಮಾತ್ರ ಇದೇ ಅಗುತ್ತಿತ್ತೇವಿನಾ ಬೇರೇನೂ ಆಗುತ್ತಿರಲಿಲ್ಲ ಎಂಬುದನ್ನು ಮಾನ್ಯ ಸದಸ್ಯರು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ದಿವಸ ನಮ್ಮ ಮುಂದೇನು ಒಂದು ಬಿಕ್ಕಟ್ಟಿದೆ, ಸಮಸ್ಯೆ ಇದೆ ಅದನ್ನು ಹೇಗೆ ಎದುರಿಸಬೇಕು, ಆ ಎದುರಿಸತಕ್ಕ ರೀತಿನೀತಿಗಳೇನು, ವಿಧಾನಗಳೇನು ಎಂಬುದನ್ನು ಕುರಿತು ಪರಿಶೀಲನೆ ಮಾಡತಕ್ಕದ್ದು ಪ್ರತಿಯೊಬ್ಬ ನಾಗರೀಕನ ಹಾಗೂ ಶಾಸಕರ ಕರ್ತವ್ಯವಾಗಿದೆ. ವಿರೋಧ ಪಕ್ಷದ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪ ನವರು ಪುನಃ ಪುನಃ ಅವರು ಭಾಷಣ ಮಾಡತಕ್ಕ ಕಾಲದಲ್ಲಿ ಜೈಪ್ರಕಾಶ್ ನಾರಾಯಣ್ ಅವರು ಮಾಡುವಂತೆ ಇವರು ಮೈಸೂರನ್ನು ಒಂದು ದೇಶ ಅಂತ ಹೇಳುತ್ತಿದ್ದಾರೆ ಹೊರತು ಇದನ್ನು ಒಂದು ರಾಜ್ಯ ಅಂತ ಅವರು ಹೇಳುವುದಿಲ್ಲ. ನಮ್ಮ ಮೈಸೂರು ರಾಜ್ಯ ದೇಶದ ಒಂದು ಘಟಕ ಮಾತ್ರ; ಮತ್ತು ನಾವು ಎಂದು ನಮ್ಮ ರಾಜ್ಯಾಂಗದ ಘಟಕವನ್ನು ಅಂಗೀಕಾರ ಮಾಡಿದೆವೋ ಅದರ ಪ್ರಕಾರ ಕೇಂದ್ರಕ್ಕೂ ಮತ್ತು ರಾಜ್ಯ ಸರ್ಕಾರ ಯಾವ ರೀತಿ ಒಂದು ಆರ್ಥಿಕ ಸಂಬಂಧವಿರ ಬೇಕು ಎಂಬುದನ್ನೆಲ್ಲಾ ರಾಜ್ಯಾಂಗದಲ್ಲಿ ಹೇಳಿವೆ; ಮತ್ತು ಆ ರಾಜ್ಯಾಂಗದ ಪ್ರಕಾರ ಮೈಸೂರು ರಾಜ್ಯಕ್ಕಾಗಲೀ ಅಥವಾ ಬೇರೆ ಯಾವ ರಾಜ್ಯಕ್ಕಾಗಲೀ ತನ್ನದೇ ಆದಂಥ ಒಂದು ಸ್ವಾತಂತ್ರ್ಯ ನೀತಿ ಯನ್ನು ಅನುಸರಿಸೋಣ ಅನ್ನತಕ್ಕ ಪರಿಸ್ಥಿತಿ ಈ ದಿನ ಇರುವುದಿಲ್ಲ. ನಾವು ಇಂದು ಯಾವ ಆರ್ಥಿಕ ಮುಗ್ಗಟ್ಟನ್ನು ನೋಡುತ್ತಾ ಇದ್ದೇವೋ ಅದು ಮೈಸೂರು ರಾಜ್ಯದಲ್ಲಿಯಾಗಲೀ, ರಾಜ್ಯದ ಯಾವ ಭಾಗದಲ್ಲಿಯೇ ಆಗಲಿ ದೇಶದ ಯಾವ ಭಾಗದಲ್ಲಯೇ ಆಗಲಿ ಒಂದು ರಾಜ್ಯಕ್ಕೆ ಮಾತ್ರ ಸ್ಥಿತಿಮಿತ ಆದಂಥ ಮುಗ್ಗಟ್ಟು ಆಲ್ಲ ಎಂದು ಗಮನದಲ್ಲಿ ಇಡಬೇಕು. ಇಂದು ನಮ್ಮಲ್ಲಿ ಬೆಳೆ ಹತ್ತೋಟಿ ತಪ್ಪಿ ಹೋಗುತ್ತಾ ಇರುವುದು ಮೈಸೂರಿನಲ್ಲಿ ಮಾತ್ರವಲ್ಲ, ಮದ್ರಾಸ್‌ನಲ್ಲಿ, ಬಂಗಾಳದಲ್ಲಿ, ಕಾಶ್ಮೀರ ದಲ್ಲಿಯೂ ಹಾಗೆ ಇದೆ. ಈ ಒಂದು ಪರಿಸ್ಥಿತಿಯಲ್ಲಿ ನಾವು ಈ ವರ್ಷದ ಬಡ್ಜೆಟ್ಟನ್ನು ತಯಾರು ಮಾಡ ಬೇಕಾದಂಥ ಪ್ರಯತ್ನ ಮಾಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ಕೇಂದ್ರ ಸರ್ಕಾರದ ಮುಂಗಡ ಪತ್ರ ಪ್ರಕಟ ಆದಮೇಲೆ ನಮ್ಮ ಮುಂಗಡ ಪತ್ರದಲ್ಲಿ ವಿಶೇಷವಾದಂಥ ಬದಲಾವಣೆ ಮಾಡತಕ್ಕ ಅವಶ್ಯಕತೆ ಬೀಳಲಿಲ್ಲ. ಈಗ ಎಲ್ಲದಕ್ಕಿಂತ ಮೊದಲು ನಾವು ವಿಚಾರ ಮಾಡಬೇಕಾದುದು ನಾಲ್ಕನೇ ಪಂಚವಾರ್ಷಿಕ ಯೋಜನೆಯ ಭವಿಷ್ಯ ಏನು ಎಂಬುದು. ಈ ನಾಲ್ಕನೇ ಪಂಚವಾರ್ಷಿಕ ಯೋಜನೆ ಕಳೆದ ವರ್ಷದಿಂದ ಪ್ರಾರಂಭ ಅಗಬೇಕಾಗಿತ್ತು, ಮತ್ತು ಕಳೆದ ವರ್ಷದಿಂದಲೇ ಪ್ರಾರಂಭ ವಾಗಿದೆ. ಅದರೆ ಇದು ಯಾವರೀತಿಯಿಂದ ಪ್ರಾರಂಭ ಆಗಬೇಕಾಗಿತ್ತು ಆ ರೀತಿ ಪ್ರಾರಂಭವಾಗಿಲ್ಲ. ನಿಜವಾಗಿ ಹೇಳುವುದಾದರೆ ಇವೊತ್ತಿನವರೆಗೂ ಕೂಡ ಕೇಂದ್ರ ಸರ್ಕಾರದವರು ನಾಲ್ಕನೇ ಪಂಚ ವಾರ್ಷಿಕ ಯೋಜನೆಯ ಮೊತ್ತ ಎಷ್ಟು ಆಗಬಹುದು ಎನ್ನುವ ಒಂದು ನಿರ್ಧಾರವಾದಂಥ ನಿರ್ಣಯ ಮಾಡಿಲ್ಲ. ಬೇರೆ ಬೇರೆ ರಾಜ್ಯಸರ್ಕಾರಗಳ ಯೋಜನೆಯನ್ನು ಯೋಜನಾ ಆಯೋಗದವರು ಒಂದು ರೀತಿಯಿಂದ ನಿರ್ಧರಿಸಿದ್ದಾರೆ. ಅದೂ ಕೂಡ ಪೂರ್ಣವಾಗಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಮ್ಮ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ 421 ಕೋಟಿ ರೂಪಾಯಿ ಅಷ್ಟು ಆಗಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ. ಅದರಲ್ಲಿ ಕೇಂದ್ರ ಸರ್ಕಾರ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮು ಏನು ಯೋಜನೆಗಳು ಇವೆ ಅವುಗಳಿಗೆ ಬೇಕಾಗತಕ್ಕಂಥ ಹಣ ಇದರಲ್ಲಿ ಸೇರಿಲ್ಲ. ಅದು ಒಟ್ಟು 25–30 ಕೋಟಿ ರೂಪಾಯಿ ಆಗಬಹುದು ಎಂದು ಒಂದು ಅಂದಾಜು ನಮ್ಮಲ್ಲಿ ಇದೆ. ಅದು ಸೇರಿದರೆ ನಾವು ಮೊದಲೇ ಯೋಜನೆ ಮಾಡಿದ ಹಾಗೆ ಸುಮಾರು 450 ಕೋಟಿ ರೂಪಾಯಿಯ ಯೋಜನೆ ನಾಲ್ಕನೇ ಪಂಚ ವಾರ್ಷಿಕ ಯೋಜನೆಯಲ್ಲಿ ಆಗುತ್ತದೆ ಎಂದು ಆಸೆ ಮಾಡಿಕೊಂಡಿದ್ದೆವು. ಈಗ ಪ್ರತಿವರ್ಷ ಯೋಜನೆ ಯನ್ನು ತಯಾರು ಮಾಡಬೇಕಾಗುತ್ತದೆ. ಈ ವರ್ಷದ ಯೋಜನೆಯನ್ನು ತಯಾರುಮಾಡುವಾಗಲೂ ಕೂಡ ಬಹಳ ಕಾಲ ಹಿಡಿದಿರತಕ್ಕಂಥಾದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇದಕ್ಕೆಲ್ಲಾ ಏನು ಕಾರಣ ಎಂದರೆ ಕೇಂದ್ರ ಸರ್ಕಾರದವರಿಗೆ ಮುಖ್ಯವಾಗಿ ವಿದೇಶದಿಂದ ಆಗಲಿ ವರ್ಲ್ಡ್ ಬ್ಯಾಂಕಿನಲ್ಲಿ ಆಗಲಿ ಅಥವಾ ಬೇರೆ ರಾಷ್ಟ್ರದಿಂದ ಆಗಲಿ ಯಾವ ಮೊತ್ತದ ಸಹಾಯ ಸಿಕ್ಕುತ್ತದೆ ಎಂದು ಹೇಳುವ ಬಗೆ ಸ್ಪಷ್ಟವಾದಂಥ ಭರವಸೆಗಳು ಇಲ್ಲ. ಆದುದರಿಂದ ಇಂದು ನಾವು ನಾಲ್ಕನೇ ಪಂಚವಾರ್ಷಿಕ ಯೋಜನೆ ನೆಯನ್ನು ಒಂದು ಅಸ್ಪಷ್ಟವಾದಂಥ, ಸ್ಥೂಲವಾದಂಥ ರೂಪರೇಷಗಳನ್ನು ಮಾತ್ರ ಇಟ್ಟುಕೊಂಡಿ ದ್ದೇವೆ. ಇದು ಒಂದು ಸ್ಪಷ್ಟವಾದಂಥ ಯೋಜನೆ ಆಗಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ. ಕಳೆದ ವರ್ಷ ನಾವು ಒಟ್ಟು 50 ಕೋಟಿ 82 ಲಕ್ಷ ರೂಪಾಯಿಯ ಒಂದು ವಾರ್ಷಿಕ ಯೋಜನೆಯನ್ನು ಸಿದ್ಧಮಾಡಿದ್ದೆವು. 50 ಕೋಟಿ 82 ಲಕ್ಷ ರೂಪಾಯಿಯ ಬದಲಾಗಿ ನಾವು ಈಗ ರಿವೈಸ್ಡ್ ಎಸ್ಟಿಮೇಟ್ ಏನು ಮಾಡಿದ್ದೇವೊ ಅದರ ಪ್ರಕಾರ ಒಟ್ಟು ಆಂಟಿಸಿಪೇಟೆಡ್ ಎಕ್ಸ್‌ಪೆಂಡಿ

(ಶ್ರೀ ರಾಮಕೃಷ್ಣ ಹೆಗಡೆ)

ಚರ್ ಸುಮಾರು 6 ಕೋಟಿ ಅಥವಾ 7 ಕೋಟಿ ರೂಪಾಯಿ ಅಷ್ಟು ಹೆಚ್ಚಾಗುತ್ತದೆ. ನಾವು ಯೋಜನೆಗೆ ಹಾಕಿಕೊಂಡ ಟಾರ್ಗೆಟ್ ಮೀರಿದ್ದೇವೆ ಎನ್ನುವ ಜಂಭದಿಂದ ಹೇಳುತ್ತಾ ಇಲ್ಲ. ಈ ಮಾತನ್ನು ಸ್ವಲ್ಪಮಟ್ಟಿಗೆ ದುಃಖದಿಂದ ಸ್ವಲ್ಪಮಟ್ಟಿಗೆ ಸಂತೋಷದಿಂದ ಹೇಳುತ್ತಾ ಇದ್ದೇನೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಭೆಯ ಮತ್ತು ಮೇಲ್ಮನೆಯ ಸದಸ್ಯರ ಒಂದು ದೊಡ್ಡ ಟೀಕೆ ಏನು ಆಗಿತ್ತು ಎಂದರೆ ನೀವು ಯೋಜನೆಗೆ ಇಟ್ಟಂಥ ಹಣವನ್ನು ಪೂರ್ಣವಾಗಿ ಖರ್ಚು ಮಾಡುವುದಿಲ್ಲ. ಪ್ರತಿಯೊಂದು ಬಾಬಿನಲ್ಲಿ ಕೂಡ ಷಾರ್ಟ್‌ಫಾಲ್ ಬರುತ್ತದೆ ಎಂದು ಅದಕ್ಕಾಗಿ ಅಡ್ಮಿನಿಸ್ಟ್ರೇಟೀವ್ ಮೆಷಿನರಿ ಇನ್ನೂ ಗೇರ್‌ಅಪ್ ಮಾಡಬೇಕು, ಇಂಪ್ರೂವ್ ಮಾಡಬೇಕು ಎಂಬುದು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಎದುರಿಸಬೇಕಾದಂಥ ಅನಿಶ್ಚಿತ ತೊಂದರೆಗಳನ್ನು ನಾವು ಎದುರಿಸಿಯೂ ಕೂಡ 250 ಕೋಟಿ ರೂಪಾಯಿಯಲ್ಲಿ 249 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಆದರೆ ಈಗ ನಮ್ಮ ಹತ್ತಿರ ಹಣದ ರಿಸರ್ವ್ ಇದ್ದರೆ, ಓವರ್‌ಡ್ರಾಫ್ಟ್ ಬದಲಾಗಿ ಕ್ರೆಡಿಟ್ ಬ್ಯಾಲೆನ್ಸ್ ರಿಜರ್ವ್‌ನಲ್ಲಿ ಇದ್ದಿದ್ದರೆ 5 ಕೋಟಿ, 6 ಕೋಟಿ, 10 ಕೋಟಿ ಹೆಚ್ಚು ಖರ್ಚು ಮಾಡಿದರೂ ಸಂತೋಷವಾಗುತ್ತಿತ್ತು. ಮಾನ್ಯ ಸದಸ್ಯರಿಗೆ ಹಿಂದಿನ ಸಂದರ್ಭದಲ್ಲಿ ಹೇಳಿದ್ದು ನನಗೆ ನೆನಪು ಉಂಟು. ಇಂದು ಓವರ್‌ಡ್ರಾಫ್ಟ್ ಬಗ್ಗೆ ಪುನಃ ಪುನಃ ಚರ್ಚೆ ಮಾಡುತ್ತಾ ಇದ್ದೇವೆ. ಈ ಓವರ್‌ಡ್ರಾಫ್ಟ್ ಬಂದಿರತಕ್ಕ ಕಾರಣ ಏನು ಎನ್ನುವುದನ್ನು ನಾನು ತೋರಿಸಿದ್ದೇನೆ. ಈ ಓವರ್‌ಡ್ರಾಫ್ಟ್ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾತ್ರ ಪ್ರಾರಂಭವಾಯಿತು. 3ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸುಮಾರು 30 ಕೋಟಿ ರೂಪಾಯಿಯಷ್ಟು ದೊಡ್ಡ ಮೊತ್ತವನ್ನು ಜಾರಿಗೆ ತಂದಂಥ ಸರ್ಕಾರಿ ಕರ್ಮಚಾರಿಗಳ ವಿಧಾನ ಮತ್ತು ತುಟ್ಟಿಭತ್ಯ ಇವುಗಳನ್ನು ಏರಿಸಿದುದರ ಪರಿಣಾಮವಾಗಿ ಹೀಗೆ ಹೆಚ್ಚು ಖರ್ಚು ಮಾಡಬೇಕಾಯಿತು, ಮತ್ತು ಇದರ ಹೊರತಾಗಿ ಆದಾಯ ಬಾಬುಗಳಲ್ಲಿ ಯಾವ ಯಾವ ಟ್ಯಾಕ್ಸ್ ಪ್ರಪೋಸಲ್ಸ್‌ನ್ನು ತರುತ್ತೇವೆ ಎಂದು ಯೋಜನಾ ಕಮೀಷನ್ ಮುಂದೆ ಹೇಳಿದ್ದೆವೋ ಆ ಎಲ್ಲಾ ಟ್ಯಾಕ್ಸೇಷನ್ ಬಾಬುಗಳನ್ನು ನಾವು ತರಲಿಲ್ಲ. ಹೀಗಾಗಿ ಅಲ್ಲಿ ಸ್ವಲ್ಪಮಟ್ಟಿಗೆ ಕೊರತೆ ಆಯಿತು. ಈ ಎರಡು ಮುಖ್ಯವಾದಂಥ ಕಾರಣದಿಂದಾಗಿ 1965-66ನೆಯ ವೇಳೆಗೆ ಸುಮಾರು 48 ಕೋಟಿ ರೂಪಾಯಿಯಷ್ಟು ಆಗಿತ್ತು ಎಂದು ನಾನು ತಮ್ಮ ಮುಂದೆ ಇಟ್ಟಿದ್ದೆ. ಈಗಲೂ ನಮ್ಮ ಹತ್ತಿರ ಇದ್ದಂಥ ಕೆಲವು ಸೆಕ್ಯೂರಿಟಿಗಳನ್ನು ಮಾರಾಟಮಾಡಿ ನಾವು ಅದರಿಂದ ತೀರಿಸಿದ್ದೇವೆ. ಸುಮಾರು 20 ಕೋಟಿ ರೂಪಾಯಿಯಷ್ಟು ತೀರಿಸಿದ್ದೇವೆ. ಈಗ ಸೆಕ್ಯೂರಿಟಿಗಳನ್ನು ಏತಕ್ಕೆ ಮಾರಿದಿರಿ ಎಂದು ಮಾನ್ಯ ಸದಸ್ಯರು ಕೇಳಿದರು. ದಿನೇ ದಿನೇ ಕಾಲ ಹೋದ ಹಾಗೆ ಸೆಕ್ಯೂರಿಟಿ ವ್ಯಾಲ್ಯೂ ಅಪ್ರಿಸಿಯೇಟ್ ಆಗುವುದಿಲ್ಲ. ದಿನೇ ದಿನೇ ಹೋದ ಹಾಗೆ ಅದರ ವ್ಯಾಲ್ಯೂ ಡಿಪ್ರಿಸಿಯೇಟ್ ಆಗುತ್ತದೆ. ಯಾವ ಸೆಕ್ಯೂರಿಟಿಗಳ ಬೆಲೆ ಇಟ್ಟುಕೊಂಡರೂ ಅದರ ಬೆಲೆ ಕಡಿಮೆಯಾಗುತ್ತದೋ ಅಂತಹ ಸೆಕ್ಯೂರಿಟಿಗಳನ್ನು ಇಟ್ಟುಕೊಂಡರೆ ಅದರಿಂದ ಸರ್ಕಾರಕ್ಕೆ ಯಾವ ತರಹ ಲಾಭ ಆಗುವುದಿಲ್ಲ. ಅದಕ್ಕಾಗಿ ನಾವು ಯೋಚನೆ ಮಾಡಿದೆವು ಇದರಿಂದ ನಮಗೆ ಲಾಭವಾಗುವ ಬದಲಾಗಿ ಹಾನಿಯಾಗುತ್ತದೆ ಎಂದು.

Sri H. SIDDAVEERAPPA (Harihar).—Please clarify the position so that we may understand how the securities can be depreciated.

ಶ್ರೀ ರಾಮಕೃಷ್ಣ ಹೆಗಡೆ.—ಸೆಕ್ಯೂರಿಟಿ ಹೇಗೆ ಡಿಪ್ರಿಸಿಯೇಟ್ ಆಗುತ್ತದೆ ಎಂದು ಮಾನ್ಯ ಸದಸ್ಯರು ಕೇಳುತ್ತಾರೆ. ಸ್ಟೇಟ್ ಸೆಕ್ಯೂರಿಟಿ ಯಾವುದೇ ಇರಲಿ ಸೆಕ್ಯೂರಿಟಿಗೆ ಇವೊತ್ತು ಓಪನ್ ಮಾರ್ಕೆಟ್‌ನಲ್ಲಿ ಡಿಮ್ಯಾಂಡ್ ಯಾವಾಗ ಇಲ್ಲವೋ ಆಗ ಅವುಗಳ ಬೆಲೆ ಕಡಿಮೆಯಾಗುತ್ತದೆ. ಅದನ್ನು ಖರೀದಿ ಮಾಡಲಿಕ್ಕೆ ಬೇರೆ ಯಾರೂ ಬರುವುದಿಲ್ಲ. ರಿಜರ್ವ್ ಬ್ಯಾಂಕ್‌ನವರು ಮಾರಾಟ ಮಾಡಬೇಕು.

Sri K. H. PATIL (Gadag).—Is it affective to the administration of Government ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಒಂದು ಮಾತನ್ನು ಹೇಳುತ್ತೇನೆ. ಗೌರ್ನಮೆಂಟ್ ಲೋನ್ಸ್ ಬಗ್ಗೆ ಇನ್ನು ಎರಡು ಮೂರು ತಿಂಗಳಿನಲ್ಲಿ ನಾವು ಮಾರ್ಕೆಟ್ಟಿಗೆ ಹೋಗಬೇಕಾಗುತ್ತದೆ.

9-30 A.M.

ಕಳೆದ ಮೂರು ವರ್ಷದ ಅನುಭವ ನಾನು ಇಲ್ಲಿ ಹೇಳುತ್ತಿದ್ದೇನೆ. ಯಾವಾಗ ನಾವು ಪಬ್ಲಿಕ್ ಲೋನಿಗಾಗಿ ಮಾರ್ಕೆಟ್ಟಿಗೆ ಹೋಗುತ್ತೇವೆಯೋ ಆಗ ಹಿಂದಿನ ಸಾಲಗಳು ಬೇರೆ ರಾಜ್ಯಗಳಲ್ಲೂ

ಇತ್ತು, ಆಂಧ್ರದಲ್ಲಿತ್ತು, ಬಿಹಾರದಲ್ಲಿತ್ತು, ಮದ್ರಾಸಿನಲ್ಲಿ ಇತ್ತು. 91 ರೂಪಾಯಿ ಕೋಟ್ ಮಾಡುತ್ತಾರೆ ಮಾರ್ಕೆಟ್ಟಿನಲ್ಲಿ. ಡಿಪ್ರಿಸಿಯೇಟ್ ಹೇಗೆ ಆಗುತ್ತದೆಂದು ಆಗ ಗೊತ್ತಾಗುತ್ತದೆ. ಆದ್ದರಿಂದ ಹೊಸ ಸಾಲ ಎತ್ತುವಾಗ ಅದಕ್ಕೆ ಸಾಕಷ್ಟು ಸಬ್‌ಸ್ಕ್ರಿಪ್‌ಶನ್ ಬರುವುದಿಲ್ಲ. ಆದ್ದರಿಂದ ನಾವು ಇದನ್ನು ಇಟ್ಟುಕೊಂಡರೆ ಪ್ರಯೋಜನವಿಲ್ಲ. ಅದಕ್ಕೋಸ್ಕರ ಸೆಕ್ಯೂರಿಟಿ ಮಾರಾಟ ಮಾಡಬೇಕಾಯಿತು. ಆದರಿಂದ ಏನೂ ಹಾನಿಯಾಗುವದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಸೆಕ್ಯೂರಿಟಿಗಳು ಮನೆಯಲ್ಲಿ ಒಂದು ಅಪದ್ಧನ ಇದ್ದ ಹಾಗೆ. ಅದು ಮನೆಯಲ್ಲಿ ಏನೂ ಇಲ್ಲ, ಒಡವೆ ಇಲ್ಲ, ಯಾವುದೂ ಇಲ್ಲವೆಂದಾಗ ಅದನ್ನು ಮಾರುತ್ತಾರೆ. I may be wrong.

Mr. SPEAKER.—Mysore and Madras Government Loans are quoted on the market at discount.

Sri H. SIDDAVEERAPPA.—It is only institutional loans what we have been getting all these years. I would very much like to know how much private people have subscribed to the loan. I am not blaming the Finance Minister. But this is a new thing that I am hearing now.

ಶ್ರೀ ರಾಮಕೃಷ್ಣ ಹೆಗಡೆ.—ಇದು ಒಂದು ಕಾರಣ ಎಂದು ಇಟ್ಟುಕೊಳ್ಳೋಣ. ಮಾನ್ಯ ಅಧ್ಯಕ್ಷರೇ, ನಾನು ಓವರ್‌ಡ್ರಾಫ್ಟಿನ ವಿಚಾರದಲ್ಲಿ ಹೇಳುತ್ತಿದ್ದೆ. ಈ ಉಳಿದ ಓವರ್ ಡ್ರಾಫ್ಟನ್ನು ಕೇಂದ್ರಸರ್ಕಾರದವರಿಗೆ ನಾವು ಕೇಳಿಕೊಂಡು ಅವರಿಂದ ಸುಮಾರು 21-22 ಕೋಟಿ ರೂಪಾಯಿಗಳಷ್ಟು ತಾತ್ಕಾಲಿಕ ಸಾಲವನ್ನು ತೆಗೆದುಕೊಂಡು ತೀರಿಸಿದ್ದೇವೆ. ನಾನು ಕಳೆದ ಸಲ ಸಭೆಯ ಮುಂದೆ ಮಾತನಾಡುವಾಗ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೆನು. ಅದೇನೆಂದರೆ, ಅದಷ್ಟು ಮಟ್ಟಿಗೆ ಇನ್ನು ಮುಂದೆ ನಾವು ಓವರ್‌ಡ್ರಾಫ್ಟಿಗೆ ಕೈಹಾಕುವುದಿಲ್ಲವೆಂದು. ನಾವು ನಮ್ಮ ಖರ್ಚನ್ನು ನಮ್ಮ ಉತ್ಪನ್ನಕ್ಕೆ ಅನುಗುಣವಾಗಿ ಮಿತವಾಗಿ ಇಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಅದನ್ನು ಪುನಃ ಪುನರುಚ್ಚರಿಸ ಬಯಸುತ್ತೇನೆ. ನಾವು ಹೆಚ್ಚು ಹೆಚ್ಚಾಗಿ ಕೆಲಸ ಆಗಬೇಕೆಂಬ ತವಕದಲ್ಲಿ ಇರಿಗೇಶನ್ ಹೆಚ್ಚು ಮಾಡಬೇಕು, ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚು ಮಾಡಬೇಕು, ಜನಾರೋಗ್ಯಕ್ಕೆ ಹೆಚ್ಚು ಖರ್ಚು ಮಾಡಬೇಕು, ಮತ್ತು ಬೇರೆ ಬೇರೆ ಸಮಾಜಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಖರ್ಚು ಮಾಡಬೇಕೆಂಬ ಉತ್ಕಟೇಚ್ಛೆಯಲ್ಲಿ, ಹಣದ ಅಭಾವವಿರುವಾಗ ಈ ತರದ ಓವರ್ ಡ್ರಾಫ್ಟಿಗೆ ಕೈಹಾಕತಕ್ಕ ಒಂದು ರೀತಿಯ ಚಟವು ನಮ್ಮ ರಾಜ್ಯವಲ್ಲದೆ ಬೇರೆ ಅನೇಕ ರಾಜ್ಯಗಳಲ್ಲೂ ಆಗಿದೆ. ಇದು ತಾತ್ಕಾಲಿಕವಾಗಿ ನಮಗೆ ಒಂದು ರೀತಿಯ ಪರಿಹಾರವನ್ನು ಕೊಡಬಹುದು. ಆದರೆ, ಧೀರ್ಘಾವಧಿಯ ದೃಷ್ಟಿಯಿಂದ ವಿಚಾರ ಮಾಡಿದರೆ, ಇದು ಕೇವಲ ಆಯಾ ರಾಜ್ಯಕ್ಕೆ ಮಾತ್ರವಲ್ಲದೆ, ಇಡೀ ದೇಶಕ್ಕೆ ಒಂದು ಅನಿಷ್ಟವನ್ನು ತರುತ್ತದೆ. ಇವತ್ತಿನ ಆರ್ಥಿಕ ಮುಗ್ಗಟ್ಟಿಗೆ ಮುಖ್ಯವಾದ ಕಾರಣ ಅದೇ ಎಂದು ನನ್ನ ಭಾವನೆ. ಆದ್ದರಿಂದ ಇನ್ನು ಬರತಕ್ಕ ನಾಲ್ಕು ವರ್ಷದ ಅವಧಿಯಲ್ಲಿ ಒಂದೊಮ್ಮೆ ಹಣದ ಅಭಾವ ಆದರೆ ಒಂದೊಮ್ಮೆ ಈ ಯೋಜನೆಯನ್ನು ಸ್ವಲ್ಪಮಟ್ಟಿಗೆ ಮೊಟಕು ಮಾಡಲಿಕ್ಕೂ ಸಿದ್ಧವಾಗಿರಬೇಕು. ಆದರೆ ಡಿಫಿಸಿಟ್ ಫೈನಾನ್ಸ್‌ಗೆ ಸರ್ವಥಾ ಕೈಹಾಕಕೂಡದು ಎಂದು ನಿರ್ಧಾರ ಮಾಡಿದ್ದೇವೆ. ಅದಕ್ಕೆ ಮಾನ್ಯ ಸದಸ್ಯರುಗಳ ಮತ್ತು ಈ ಮನೆಯ ಸಹಕಾರವನ್ನು ಅಪೇಕ್ಷಿಸುತ್ತೇನೆ.

ಕಳೆದ ವರ್ಷ ಈ ಬಗ್ಗೆ ಹೇಳಿದೆ. ಈ ವರ್ಷ ಈ ಯೋಜನೆಯ ಪ್ರಾರಂಭದಲ್ಲಿ ನಾವು 62½ ಕೋಟಿ ರೂಪಾಯಿಯ ಯೋಜನೆಯಾಗಬೇಕೆಂದು ನಿರ್ಣಯ ಮಾಡಿದ್ದೇವೆ. ಈ 62½ ಕೋಟಿ ರೂಪಾಯಿಯನ್ನು ಯಾವ ಯಾವ ರೀತಿಯಲ್ಲಿ ಯಾವ ಯಾವ ಕೆಲಸಗಳಿಗೆ ವಿಂಗಡಣೆ ಮಾಡಬೇಕೆನ್ನುವ ವಿಚಾರದಲ್ಲಿ ನಾನು ಸ್ಥೂಲವಾಗಿ ಈ ಮನೆಯಲ್ಲಿ ಪ್ರಸ್ತಾಪಿಸಿದ್ದೇನೆ. ಅದನ್ನು ಪುನಃ ಇಲ್ಲಿ ಹೇಳಿದರೆ ತಪ್ಪಾಗಲಾರದು. ಮುಖ್ಯವಾದಂತಹ ಕೆಲವೊಂದು ಬಾಬುಗಳನ್ನು ಮಾತ್ರ ನಾನು ಇಲ್ಲಿ ಹೇಳುತ್ತೇನೆ.

ವ್ಯವಸಾಯದ ಉತ್ಪನ್ನದ ಬಾಬಿಗೆ ಕಳೆದ ವರ್ಷ 334 ಲಕ್ಷ ರೂಪಾಯಿ ಒದಗಿಸಿದಂತಹಾ ಈ ಬಾಬಿಗೆ, ಈ ಸಲ 380 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಮೈನರ್ ಇರಿಗೇಷನ್ನಿಗೆ ಕಳೆದ ಸಲ 620 ಲಕ್ಷ ರೂಪಾಯಿ ಒದಗಿಸಿದಂತದ್ದು, ಈ ಸಲ 730 ಲಕ್ಷ ರೂಪಾಯಿಗಳು ಒದಗಿಸಬೇಕೆಂಬುದನ್ನು ತೀರ್ಮಾನ ಮಾಡಿದ್ದೇವೆ. ಸಾಯಿಲ್ ಕನ್‌ಸರ್ವೇಶನಿಗೆ ಕಳೆದ ಸಲ 100 ಲಕ್ಷ ರೂಪಾಯಿ, ಈ ಸಲ ಕೂಡ 100 ಲಕ್ಷ ಒದಗಿಸಬೇಕೆಂದು ಮಾಡಿದ್ದೇವೆ. ಒಟ್ಟು ಅಗ್ರಿಕಲ್ಚರಲ್ ಪ್ರೊಗ್ರಾಂಗೆ ಒಟ್ಟು 14 ಕೋಟಿ 4 ಲಕ್ಷ ರೂಪಾಯಿ ಕಳೆದ ಸಲ ಒದಗಿಸಿದ ಬದಲಾಗಿ ಈ ಸಲ 15 ಕೋಟಿ 40 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

(ಶ್ರೀ ರಾಮಕೃಷ್ಣ ಹೆಗಡೆ)

ಇನ್ನು ಇರಿಗೇಷನ್ ಫ್ಲಡ್ ಕಂಟ್ರೋಲ್ ಮತ್ತು ಪವರ್ ಕಳೆದ ಸಲ 5 ಕೋಟಿ ಮೀಡಿಯಂ ಮತ್ತು ಮೇಜರ್ ಇರಿಗೇಶನಿಗೆ ಒದಗಿಸಿದ್ದೇವೆ. ಅದೇ ಬಾಬಿಗೆ ಈ ವರ್ಷ ನಾವು ಸುಮಾರು 12 ಕೋಟಿ ರೂಪಾಯಿ ಒದಗಿಸಬೇಕೆಂದು ಮಾಡಿದ್ದೇವೆ. ಅದರಂತೆ ಪವರ್‌ಗೆ 14 ಕೋಟಿ 21 ಲಕ್ಷ ರೂಪಾಯಿ ಕಳೆದ ವರ್ಷ. ಈ ಸಲ 18 ಕೋಟಿ 5 ಲಕ್ಷ ಒದಗಿಸಬೇಕೆಂದು ಮಾಡಿದ್ದೇವೆ. ಈ ರೀತಿಯಾಗಿ 3-4 ಬಾಬುಗಳಿಗೆ ವಿಶೇಷವಾದ ಪ್ರಾಶಸ್ತ್ಯವನ್ನು ಕೊಡಬೇಕೆಂದು ರಾಜ್ಯಸರ್ಕಾರದವರು ತೀರ್ಮಾನಿಸಿದ್ದಾರೆ.

ಇನ್ನೂ ಒಂದು ವಿಚಾರ ಹೇಳುತ್ತೇನೆ. ಕಳೆದ ವರ್ಷ ಕೈಗಾರಿಕೆಗೆ 181 ಲಕ್ಷ ಈ ವರ್ಷ 319 ಲಕ್ಷ. ಇಂದು ನಾವು ಪ್ರತ್ಯೇಕ, ಪ್ರತ್ಯೇಕವಾಗಿ ವಿಚಾರ ಮಾಡಿದರೆ, ಪ್ರತಿಯೊಂದು ಕೆಲಸವೂ ಅಷ್ಟೇ ಮಹತ್ವದೆಂದು ಕಾಣುತ್ತದೆ. ಶಿಕ್ಷಣ ಮಹತ್ವದ್ದು, ಸಮಾಜಕಲ್ಯಾಣ ಮಹತ್ವದ್ದು, ರೋಡ್ಸ್ ಮಹತ್ವದ್ದು, ಹೆಲ್ತ್ ಮಹತ್ವದ್ದು, ಎಲ್ಲಾ ಮಹತ್ವದ್ದು, ಆದರೆ ನಮ್ಮ ರಿಸೋರ್ಸ್‌ಸ್ ಕಡಿಮೆ ಇರುವಾಗ ಅವುಗಳನ್ನು ಯಾವ ಪ್ರಮಾಣದಲ್ಲಿ ಯಾವ ಯಾವ ಬಾಬುಗಳಿಗೆ ಒದಗಿಸಬೇಕೆಂದು ಹೇಳುವಂತದ್ದು ಅತಿ ಮುಖ್ಯವಾದಂತಹ ವಿಚಾರ ಮತ್ತು ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ಸಹಕಾರ ಕೊಡದಿದ್ದರೆ, ಈ ಕೆಲಸಗಳನ್ನು ಮಾಡಲು ಸಾಧ್ಯವಾಗಲಾರದು. ಮಾನ್ಯ ಮುಖ್ಯಮಂತ್ರಿಯವರು ಪುನಃ ಪುನಃ ಹೇಳಿದ್ದಾರೆ. ಅದೇನೆಂದರೆ, ಒಂದು 4–6 ವರ್ಷ ನಾವು ಇನ್ನಿತರ ಎಲ್ಲಾ ಕೆಲಸಗಳನ್ನೂ ನಿಲ್ಲಿಸಿದರೂ ಪರವಾ ಇಲ್ಲ, ಆದರೆ, ವ್ಯವಸಾಯದ ಅಭಿವೃದ್ಧಿ ಕಾರ್ಯಕ್ರಮಗಳು, ಅಂದರೆ ಅದರಲ್ಲಿ ವ್ಯವಸಾಯ ಬಂತು, ಸಾಯಿಲ್ ಕನ್‌ಸರ್ವೇಶನ್ ಬಂತು, ಮೈನರ್ ಇರಿಗೇಶನ್ ಬಂತು, ಮೀಡಿಯಂ ಮತ್ತು ಮೇಜರ್ ಇರಿಗೇಶನ್ ಬಂತು ಮತ್ತು ಫಾರೆಸ್ಟಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯಕ್ರಮ ಬಂತು. ಅದಕ್ಕೆ ಅತಿ ಉನ್ನತವಾದಂತಹ ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳಿದ್ದಾರೆ. ಎರಡನೆಯ ಪ್ರಾಶಸ್ತ್ಯ ಅದರ ನಂತರ, ನಮ್ಮ ರಾಜ್ಯದಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಗಬೇಕೇ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಹೀಗೆ ಈ ವರ್ಷದ ಯೋಜನೆಗೆ 62½ ಕೋಟಿ ರೂಪಾಯಿಯನ್ನು ನಾವು ಈ ರೀತಿಯಾದಂತಹ ಪ್ರಾಶಸ್ತ್ಯವನ್ನು ಕೊಟ್ಟು ಕಾರ್ಯಗತ ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

ಮಾನ್ಯ ಅಧ್ಯಕ್ಷರೇ, ಕೆಲವು ಜನ ಸದಸ್ಯರುಗಳು, ಅದರಲ್ಲೂ ಮುಖ್ಯವಾಗಿ ನನ್ನ ಸ್ನೇಹಿತರಾದ ಶಿವಪ್ಪನವರು (ಅವರು ಇಲ್ಲಿ ಇಲ್ಲ) ಮತ್ತು ಮಾನ್ಯ ಶ್ರೀ ಸಿದ್ಧವೀರಪ್ಪನವರು ಕೂಡ ನಮ್ಮ ಸಾಲದ ಬಗ್ಗೆ ಬಹಳ ತೀವ್ರವಾದ ಟೀಕೆ ಮಾಡಿದ್ದಾರೆ. ನಾನು ಮುಂಗಡ ಪತ್ರದಲ್ಲಿ ಯಾವ ತರಹದ ಚಮತ್ಕಾರವನ್ನೂ ತೋರಿಸಿಲ್ಲ. ಒಂದು ಮಾತನ್ನು ಸ್ಪಷ್ಟವಾಗಿ ಮಾನ್ಯ ಸಭೆಗೆ ಹೇಳಿದ್ದೇನೆ. ಏನೆಂದರೆ, ಯಾವ ಒಂದು ವಿಚಾರವನ್ನೂ ಮುಚ್ಚುಮರೆಯಿಲ್ಲದೆ ಪ್ರಸ್ತಾಪ ಮಾಡಿದ್ದೇನೆಂದು. ಏಕೆಂದರೆ, ಇಂತಹ ಒಂದು ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ಮಾನ್ಯ ಸದಸ್ಯರುಗಳಿಂದ ಮುಚ್ಚುಮರೆ ಮಾಡಿ ಯಾವುದೇ ಅಂಕಿಸಂಖ್ಯೆಗಳನ್ನು ಅವರಿಂದ ಅಡಗಿಸಿಟ್ಟು ಸರ್ಕಾರ ಕೆಲಸ ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಮುಂಗಡ ಪತ್ರದಲ್ಲಿ ನನಗೆ ತಿಳಿದಮಟ್ಟಿಗೆ ಇಂದಿನ ಪರಿಸ್ಥಿತಿ, ಅದಕ್ಕೆ ಇರುವ ಕಾರಣ, ನಮಗಿರುವ ತೊಂದರೆ, ಇವೆಲ್ಲಾ ವಿಚಾರಗಳನ್ನೂ ಬಹಳ ದೀರ್ಘವಾಗಿ ವಿವರಿಸಿದ್ದೇನೆ. ಸಾಲದ ವಿಚಾರವನ್ನೂ ಸಹ ಅದರಲ್ಲಿ ಪ್ರಸ್ತಾಪ ಮಾಡಿದ್ದೇನೆ. ಸಾಲದ ವಿಚಾರವಾಗಿ ಮಾನ್ಯ ಶ್ರೀ ಸಿದ್ಧವೀರಪ್ಪನವರು ಬಹಳ ಸೀರಿಯಸ್ಸಾಗಿ ಹೇಳಿದರು ಎಂದು ನಾನು ತಿಳಿಯುವುದಿಲ್ಲ. ಸಾಲ ಏತಕ್ಕೆ ಮಾಡಬೇಕು ಎಂದು ಕೇಳಿದರು. ಇದು ಒಂದು ಸಾಮಾನ್ಯವಾದ ವಿಚಾರವಾದ್ದರಿಂದ ಇದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ನಮ್ಮ ದೇಶ ಬಹಳ ಹಿಂದುಳಿದ ದೇಶ. ಇದು ಎಲ್ಲರಿಗೂ ಗೊತ್ತು. ಈ ದೇಶವನ್ನು ಅಭಿವೃದ್ಧಿಗೆ ತರಬೇಕಾದರೆ ನಾವು ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಈ ಹಣ ನಮ್ಮಲ್ಲಿ ಎಲ್ಲಿಯವರೆಗೆ ಸೆಲ್ಫ್-ಜನರೇಟ್ ಆಗುವುದಿಲ್ಲವೋ ಅಲ್ಲಿಯವರೆಗೆ ಸಾಲ ತಂದು ಕೆಲಸ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸ್ಟ್ಯಾಗ್‌ನೇಷನ್ ಹೋಗುವುದಿಲ್ಲ. ಸಾರ್ವಜನಿಕ ಭಾಷಣದಲ್ಲಿ ಒಂದು ಉದಾಹರಣೆಯನ್ನು ಆಗಾಗ್ಗೆ ಕೊಡುತ್ತಿರುತ್ತೇನೆ, ಏನೆಂದರೆ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ 50–60 ವರ್ಷಗಳಿಂದ ಸ್ವಂತವಾಗಿ ಇದ್ದ ಜಮೀನನ್ನು ಒಬ್ಬ ರೈತ ಯಾರಿಗೋ ಅಡವು ಹಾಕಿ, ನಂತರ ಅದೇ ಜಮೀನಿನಲ್ಲಿ ಗುಲಾಮನಂತೆ ಕೂಲಿಯಾಗಿ ಕೆಲಸ ಮಾಡುತ್ತಿದ್ದ, ನಂತರ ದೇಶಕ್ಕೆ ಸ್ವತಂತ್ರ ಬಂದಾಗ ಅವನ ಜಮೀನು ಅವನಿಗೇ ಸಿಕ್ಕಿತು. ನಂತರ ಅವನು ಸಾಲ ಮಾಡಿಯಾದರೂ ತಂದು ಆ ಜಮೀನನ್ನು ಅಭಿವೃದ್ಧಿಗೆ ತರಬೇಕು ; ಆ ಜಮೀನನ್ನು ನೀರಾವರಿಗೆ ಒಳಪಡಿಸಿ

ವರ್ಷಕ್ಕೆ 2-3 ಬೆಳೆಯನ್ನು ತೆಗೆದರೆ ಅವನಿಗೆ ಅನುಕೂಲವಾಗುತ್ತದೆ. ನಂತರ ಸಾಲವನ್ನು ಅವನು ತೀರಿಸಿಕೊಳ್ಳಬಹುದು. ಇದೇ ಉದಾಹರಣೆ ನಮ್ಮ ದೇಶಕ್ಕೂ ಕೊಡಬಹುದು. ಸಾಲ ಹೆಚ್ಚಾಗಿದೆ ಎಂದು ಯಾರೂ ಭಯ ಪಡುವಂತಿಲ್ಲ. ಮಾನ್ಯ ಶ್ರೀ ಸಿದ್ದವೀರಪ್ಪನವರು ಅವರ ಭಾಷಣದಲ್ಲಿ ಹೇಳಿದರು, ಕಾನ್ಸ್ಟಿಟ್ಯೂಷನ್‌ನಲ್ಲಿ ಒಂದು ಪ್ರಾವಿಷನ್ ಇದೆ, ಅದರಂತೆ ರಾಜ್ಯ ಸರ್ಕಾರಗಳು ಎಷ್ಟರ ಮಟ್ಟಿಗೆ ಸಾಲವನ್ನು ಪಡೆಯಬಹುದು ಎನ್ನುವುದರ ಬಗ್ಗೆ ಒಂದು ಮಿತಿಯನ್ನು ಶಾಸನದ ಮುಖಾಂತರ ಮಾಡಬೇಕೆಂದು ಹೇಳಿದರು. ಅದು ನನಗೂ ಗೊತ್ತು.

Sri H. SIDDAVEERAPPA.—Articles 292 and 293 are very useful provisions and they have been purposefully put in the Constitution. Why? It is with a view to fixing limits to borrowings and finding out whether there is any necessity for raising any loan. The provisions are mandatory. It is a very helpful provision.

Sri RAMAKRISHNA HEGDE.—It may be helpful. I do not say it is not helpful.

Mr. SPEAKER.—If it is merely helpful, it is not mandatory.

Sri RAMAKRISHNA HEGDE.—It is a matter of opinion. We may consider whether it is desirable to have such a limit on the loan that the State Government takes. ಈಗ ಇಂತಿಷ್ಟೇ ಸಾಲ ಇರಬೇಕೆಂದು ಒಂದು ಮಿತಿಯನ್ನು ಹಾಕಿದರೆ, ಅದರಿಂದ ಏನಾಗುತ್ತದೆ ಎಂದರೆ, ಸರ್ಕಾರದ ಕೈ ಕಟ್ಟುತ್ತದೆ. ಸಾಲದ ಒಂದು ಮಿತಿ ನಮಗಿರುತ್ತದೆ. ಏನಾದರೂ ಪರಿಸ್ಥಿತಿ ಬಂದಾಗ ಹೆಚ್ಚು ಸಾಲವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಯಾರು ಯಾರಿಂದ ಸಾಲವನ್ನು ತೆಗೆದುಕೊಂಡಿದ್ದೇವೆಂದು ಮಾನ್ಯ ಸದಸ್ಯರಿಗೆ ತಿಳಿಸದೆ ಇಲ್ಲ. ಪ್ರತಿಯೊಂದು ಸಲವೂ ಈ ಸದನದ ಮುಂದೆ ಸಾಲದ ವಿವರವನ್ನು ಇಡುತ್ತಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸಾಲ ತೆಗೆದುಕೊಂಡ ಮೇಲೆ ನಮಗೆ ತಿಳಿಸುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಅಧಿಕಾರಿಗಳಿಗೆ ಕೆಲವೊಂದು ಅಧಿಕಾರವಿರುತ್ತದೆ, ಅದರ ಪ್ರಕಾರ ಸಾಲವನ್ನು ಮಾಡುತ್ತಾರೆ. ನಂತರ ಅದರ ವಿವರವನ್ನು ಸಭೆಯ ಮುಂದೆ ಇಡುತ್ತೇವೆ. ಈ ಸಾಲದ ಬಗ್ಗೆ ಹೇಳುವಾಗ, ಮೈಸೂರು ರಾಜ್ಯದಲ್ಲಿ ಎಷ್ಟು ಸಾಲ ಇತ್ತೋ, ಅದೇ ಪ್ರಕಾರ ನಮ್ಮ ನೆರೆಹೊರೆಯ ರಾಜ್ಯಗಳಲ್ಲಿ ಎಷ್ಟು ಸಾಲ ಇದೆಯೆಂಬುದನ್ನು ಮಾನ್ಯ ಸದಸ್ಯರಿಗೆ ಹೇಳಿದರೆ, ಅವರಿಗೆ ಒಂದು ತರಹದ ಕಲ್ಪನೆ ಬರಬಹುದು. ಆಂಧ್ರದಲ್ಲಿ 462.90 ಕೋಟಿ ಸಾಲವಿದೆ. ಕೇರಳದಲ್ಲಿ 200.72 ಕೋಟಿ ಸಾಲವಿದೆ. ಮದ್ರಾಸ್ ರಾಜ್ಯದಲ್ಲಿ 388.79 ಕೋಟಿ ಸಾಲವಿದೆ. ಮೈಸೂರು ರಾಜ್ಯದಲ್ಲಿ 307.64 ಕೋಟಿ ಸಾಲವಿದೆ. ಕೇರಳ ರಾಜ್ಯ ಒಂದು ಬಿಟ್ಟರೆ ಮೈಸೂರು ರಾಜ್ಯಕ್ಕಿಂತ ಇನ್ನಿತರೆ ರಾಜ್ಯಗಳ ಸಾಲದ ಭಾಗ ಹೆಚ್ಚು ಇದೆ. ಅದರ ಅರ್ಥ ಆ ರಾಜ್ಯಗಳವರು ನಮಗಿಂತ ಬಡವರೆಂದು ಅಲ್ಲ. ಮದ್ರಾಸ್ ರಾಜ್ಯದವರು ಅನೇಕ ದೃಷ್ಟಿಗಳಲ್ಲಿ ನಮಗಿಂತ ಮೇಲ್ಮಟ್ಟದಲ್ಲಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಆ ರಾಜ್ಯಗಳ ಅಸೆಟ್ಸ್ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅದು ನನ್ನಲ್ಲಿ ಇಲ್ಲ. ನಮ್ಮ ರಾಜ್ಯದ ಅಸೆಟ್ಸ್ ಎಷ್ಟು ಇದೆ ಎನ್ನುವುದನ್ನು ಹೇಳಿದ್ದೇನೆ. ಸಾಲದ ಬಗ್ಗೆ ಒಂದು ವಿಚಾರವನ್ನು ಹೇಳಿ ಮುಗಿಸುತ್ತೇನೆ. ಸಾಲ ಹೆಚ್ಚುಇದೆ ಎಂದು ಯಾರೂ ಕಂಗಾಲಾಗಬಾರದು. ಸಾಲದ ಹಣವನ್ನು ಯೋಜನೆಗಳಲ್ಲಿ ತೊಡಗಿಸುತ್ತೇವೆ. ಅದರಿಂದ ಉತ್ಪಾದನೆ ಬರುತ್ತದೆ. ನಂತರ ಸಾಲಗಳನ್ನು ತೀರಿಸುತ್ತೇವೆ. ಕೇಂದ್ರಸರ್ಕಾರದಿಂದ ಪಡೆದ ಸಾಲವಾಗಲೀ, ಸಾರ್ವಜನಿಕರಿಂದ ಪಡೆದ ಸಾಲವಾಗಲಿ ಒಂದು ಸಾಲವನ್ನೂ ತೀರಿಸುವುದರಲ್ಲಿ ನಾವು ಡಿಫಾಲ್ಟರ್ ಆಗಿಲ್ಲವೆಂದು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕು. ಮಾನ್ಯ ಶ್ರೀ ಸಿದ್ದವೀರಪ್ಪನವರು 10 ವರ್ಷಗಳ ಹಿಂದೆ ಮೈಸೂರು ರಾಜ್ಯದಲ್ಲಿ ಯಾವ ಸ್ಥಿತಿ ಇತ್ತೋ ಆಗ ಎಷ್ಟು ಕಡಿಮೆ ಖರ್ಚಾಗುತ್ತಿತ್ತೋ, ಆಗ ಎಷ್ಟು ಸಾಲವಿತ್ತೋ, ಅದಕ್ಕಿಂತ ಹೆಚ್ಚು ಸಾಲವನ್ನು ಈಗ ಮಾಡಿದ್ದಾರೆಂದು ಹೇಳಿದರು. ಮಾನ್ಯ ಶ್ರೀ ಶಿವಪ್ಪನವರು ಕೂಡ ದೇಶದಲ್ಲಿ ಯಾವ ಪ್ರೋಗ್ರೆಸ್ ಕೂಡ ಆಗಿಲ್ಲವೆಂದು ಒತ್ತಿ ಒತ್ತಿ ಹೇಳಿದ್ದಾರೆ. ನನ್ನ ಬಡ್ಜೆಟ್ ಭಾಷಣದಲ್ಲಿ ಸ್ವಲ್ಪ ಮಟ್ಟಿಗೆ ಈ 10 ವರ್ಷದ ಅವಧಿಯಲ್ಲಿ ಮಾಡಿದಂಥ ಪ್ರಗತಿಯ ಒಂದು ಸ್ಥೂಲವಾದ ಚಿತ್ರವನ್ನು ಕೊಟ್ಟಿದ್ದೇನೆ. ಆದರೂ ಕೂಡ ಅದೇ ವಿಷಯವನ್ನು ಪುನಃ ಪ್ರಸ್ತಾಪಿಸುವುದರಿಂದ ಪುನರುಕ್ತಿಯಾದರೂ ಕೂಡ, ಒಂದೆರಡು ನಿಮಿಷಗಳಲ್ಲಿ ಪುನಃ

(ಶ್ರೀ ರಾಮಕೃಷ್ಣ ಹೆಗಡೆ)

ಅದೇ ವಿಚಾರವನ್ನು ಹೇಳಿದರೆ ಮಾನ್ಯ ಸದಸ್ಯರಿಗೆ ಬೇಸರವಾಗುವುದಿಲ್ಲವೆಂದು ತಿಳಿದಿದ್ದೇನೆ. ಈಗ ಏನು ಕೆಲಸ ಮಾಡಿದ್ದೇವೆ ಎನ್ನುವುದು ಮುಖ್ಯ. ಮಾಡಿರುವ ಕೆಲಸದಲ್ಲಿ ತಪ್ಪು ಇದ್ದರೆ ಆ ತಪ್ಪನ್ನು ತಿದ್ದಿಕೊಳ್ಳೋಣ. ಇನ್ನು ಮುಂದೆ ಇನ್ನೂ ಹೆಚ್ಚಿನ ಸಾಧನೆ ಮಾಡುವ ನಿರ್ಧಾರ ಮಾಡೋಣ. 10 ವರ್ಷಗಳ ಹಿಂದೆ ಏನು ಪರಿಸ್ಥಿತಿ ಇತ್ತು ಎನ್ನುವುದನ್ನು ಒಂದು ಸ್ವಲ್ಪದರಲ್ಲಿ ಹೇಳುತ್ತೇನೆ; 1957-58 ರಿಂದ 1966-67 ರವರೆಗೆ ಅಂದರೆ 10 ವರ್ಷದ ಒಂದು ಚಿತ್ರವನ್ನು ಕೊಡುತ್ತಿದ್ದೇನೆ. ಆಹಾರಧಾನ್ಯದ ಉತ್ಪಾದನೆ 32 ಲಕ್ಷ ಟನ್ ಇದ್ದುದು 47 ಲಕ್ಷ ಟನ್‌ಗೆ ಹೋಗಿದೆ. ಅಂದರೆ 47 ಪರ್‌ಸೆಂಟ್ ಹೆಚ್ಚಾಗಿದೆ. ಗೊಬ್ಬರದ ಉಪಯೋಗವು 29 ಸಾವಿರ ಟನ್ ಇದ್ದುದು ಈಗ ಒಂದು ಲಕ್ಷ 80 ಸಾವಿರ ಟನ್‌ಗೆ ಹೆಚ್ಚಿದೆ. ಅಂದರೆ 521 ಪರ್‌ಸೆಂಟ್ ಹೆಚ್ಚಾಗಿದೆ. ಸೀಡ್ಸ್ ಫಾರಮ್ಸ್ 9 ಇದ್ದುದು ಇವತ್ತು 73 ಆಗಿದೆ. ಟ್ರಾಕ್ಟರ್ ಹೈರ್ ಪರ್‌ಚೇಸ್ 69 ಇದ್ದುದು 500ಕ್ಕೆ ಏರಿದೆ.

ಡೀಜಲ್ ಸೆಟ್ಸ್ 10 ಇದ್ದದ್ದು, ಈಗ ಒಂದು ವರ್ಷಕ್ಕೆ ಎರಡು ಸಾವಿರ ಡೀಜಲ್ ಸೆಟ್ಸ್ ಅನ್ನು ಕೊಡುತ್ತಿದ್ದೇವೆ. ಈಗ ರೈತರಿಗೆ ಪ್ರತಿವರ್ಷ 20 ಕೋಟಿ ರೂಪಾಯಿಗಳ ಅಲ್ಪಾವಧಿ ಸಾಲವನ್ನು ಕೊಡುತ್ತಿದ್ದೇವೆ. ಹಿಂದೆ ಇದು 7-8 ಕೋಟಿ ರೂಪಾಯಿಗಳು ಮಾತ್ರ ಇತ್ತು. ಮೇಜರ್ ಮೀಡಿಯಂ ಮತ್ತು ಮೈನರ್ ಇರಿಗೇಷನ್ನಿಗಾಗಿ ಈ ಅವಧಿಯಲ್ಲಿ 90 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇದರ ಪರಿಣಾಮವಾಗಿ 11 ಲಕ್ಷ ಎಕರೆ ನೀರಾವರಿಯಾಗಿದೆ. ಇವೊತ್ತು ಅದರ ಉಪಯೋಗ ಆಗುತ್ತಿದೆ. ಕಮ್ಯುನಿಕೇಷನ್ ಮೇಲೆ 93 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರಿಂದ 14 ಸಾವಿರ ಮೈಲಿ ರಸ್ತೆ ಆಗಿದೆ. ಇದರಿಂದ ಹಳ್ಳಿಗಾಡಿನ ರಸ್ತೆಯ ಉದ್ದ 26 ಸಾವಿರ ಮೈಲಿಗೆ ಏರಿದೆ. ಸೇತುವೆಗಳ ಸಂಖ್ಯೆ 272 ಇದ್ದದ್ದು 415ಕ್ಕೆ ಏರಿದೆ. ಇದೇ ರೀತಿ ಶಿಕ್ಷಣದಲ್ಲಿ ಪ್ರೈಮರಿ ಸ್ಕೂಲುಗಳ ಸಂಖ್ಯೆ 24 ಸಾವಿರ ಇದ್ದದ್ದು 31 ಸಾವಿರಕ್ಕೆ ಏರಿದೆ. ಆಮೇಲೆ ಗಂಡುಹುಡುಗರ ಮತ್ತು ಹೆಣ್ಣುಮಕ್ಕಳ ಅಡ್ಮಿಷನ್ 20.25ರಿಂದ 36.36 ಲಕ್ಷಕ್ಕೆ ಏರಿದೆ. ಸೆಕೆಂಡರಿ ಸ್ಕೂಲಿನ ಸಂಖ್ಯೆ 566 ರಿಂದ 1,670ಕ್ಕೆ ಏರಿದೆ. ಹುಡುಗರ ಸಂಖ್ಯೆ 1,87,000ರಿಂದ 5,07,000ಕ್ಕೆ ಏರಿದೆ. ಇಂಜನಿಯರಿಂಗ್ ಕಾಲೇಜಿನಲ್ಲಿ ಅಡ್ಮಿಷನ್ 600ಕ್ಕೆ ಏರಿದೆ. ಈಗ ನಮ್ಮಲ್ಲಿ 15 ಇಂಜನಿಯರಿಂಗ್ ಕಾಲೇಜುಗಳು ಇವೆ. ಇದೇ ರೀತಿಯಲ್ಲಿ ಪ್ರತಿಯೊಂದು ಬಾಬಿನಲ್ಲಿಯೂ ನಾವು ಪ್ರಗತಿಯನ್ನು ಸಾಧನೆ ಮಾಡಿದ್ದೇವೆ. ಇನ್ನು ನಾನು ಉಳಿದ ವಿವರಗಳನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಬಯಸುವುದಿಲ್ಲ. ಒಂದು ಮಾತ್ರ ನಾನು ಹೇಳುತ್ತೇನೆ. ಜನ ಸಂಖ್ಯೆ ಕೂಡ ಎಷ್ಟು ಬೆಳೆಯಬೇಕೋ ಅಷ್ಟು ಬೆಳೆದಿದೆ. ಮಾನ್ಯ ಅಧ್ಯಕ್ಷರೇ, ಈ ರೀತಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಳೆದ ಒಂದು ದಶಕದಲ್ಲಿ ನಾವು ಮಾಡಿದಂತಹ ಪ್ರಗತಿ, ಸಾಧಿಸಿದಂತಹ ಅಭಿವೃದ್ಧಿ ಒಂದು ತೀರಾ ಸಣ್ಣ ಪ್ರಮಾಣದ್ದು ಎಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಬರುವ ದಶಕದಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸೋಣ. ಆದ್ದರಿಂದ ಚಿತ್ರದ ಒಂದು ಮಗ್ಗುಲನ್ನು ಮಾತ್ರ ನೋಡದೆ ಎರಡೂ ಮಗ್ಗುಲನ್ನೂ ನೋಡಬೇಕೆಂದು ನಾನು ಅವರಲ್ಲಿ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮಾನ್ಯ ಸಿದ್ದವೀರಪ್ಪನವರು ಒಂದು ಮಾತನ್ನು ಹೇಳಿದರು. ಅದೇನೆಂದರೆ ಮಂತ್ರಿಗಳ ಸಂಖ್ಯೆ ಹೆಚ್ಚಾಗಿದೆ. ಅವರ ಖರ್ಚು ಮೊದಲು 6 ಲಕ್ಷ ರೂಪಾಯಿಗಳಿದ್ದದ್ದು ಈಗ 16-17 ಲಕ್ಷಕ್ಕೆ ಏರಿದೆ ಎಂದು. ಅವರು ಈ ಮಾತನ್ನು ಗೊತ್ತಿದ್ದು ಹೇಳಿದರೋ ಅಥವಾ ಗೊತ್ತಿಲ್ಲದೇ ಹೇಳಿದರೋ ಅದು ನನಗೆ ಗೊತ್ತಿಲ್ಲ. ಹಿಂದೆ ಮಾನ್ಯ ಸಿದ್ದವೀರಪ್ಪನವರ ಕಾಲದಲ್ಲಿ 1961-62ನೇ ಇಸವಿಯವರೆಗೂ ಮಂತ್ರಿಗಳ ಬಗ್ಗೆ ಏನು ಹಣವನ್ನು ಖರ್ಚು ಮಾಡುತ್ತಿದ್ದರೋ ಅದನ್ನು ಪ್ರತ್ಯೇಕವಾಗಿ ತೋರಿಸುತ್ತಿದ್ದರು. ಸಿಬ್ಬಂದಿಯನ್ನು ಅದರಲ್ಲಿ ತೋರಿಸುತ್ತಾ ಇರಲಿಲ್ಲ. ಕಳೆದ 1962-63ನೇ ಇಸವಿಯಿಂದ ಇವೊತ್ತಿನವರೆಗೂ ಮಂತ್ರಿಗಳ ಖರ್ಚಿನಲ್ಲಿ ಸಿಬ್ಬಂದಿಯ ಖರ್ಚನ್ನೂ ಕೂಡ ತೋರಿಸುತ್ತಿದ್ದಾರೆ. ಆದ್ದರಿಂದ ಅದರ ಖರ್ಚು ಹೆಚ್ಚಾಗಿದೆ. ನಿಜವಾಗಿ ನೋಡಿದರೆ ಮಂತ್ರಿಗಳ ಖರ್ಚು ಹೆಚ್ಚಾಗಿಲ್ಲ.

ಇನ್ನು ಈ ಸಲದ ಚರ್ಚೆಯಲ್ಲಿ ಮತ್ತು ಹಿಂದಿನ ಸಲದ ಚರ್ಚೆಯಲ್ಲಿ ಕೂಡ ನಮ್ಮ ರಾಜ್ಯದ ಔದ್ಯೋಗಿಕ ಅಭಿವೃದ್ಧಿಯ ವಿಚಾರದಲ್ಲಿ ಮಾತನಾಡುತ್ತಾ ಮಾನ್ಯ ಸದಸ್ಯರು ಕೆಲವೊಂದು ಟೀಕೆಯನ್ನು ಮಾಡಿದರು. ಈಗ ಎಷ್ಟೇ ಪ್ರಾಮುಖ್ಯವನ್ನು ವ್ಯವಸಾಯದ ಬಗ್ಗೆ ಕೊಟ್ಟರೂ ಔದ್ಯೋಗಿಕ ಅಭಿವೃದ್ಧಿ ಮುಂದುವರಿಯುವ ಹಾಗಿಲ್ಲ. ಏಕೆಂದರೆ, ವ್ಯವಸಾಯದ ಮೇಲೆ ಏನೊಂದು ಜನ ಸಂಖ್ಯೆಯ ಭಾರ ಬಿದ್ದಿದೆಯೋ ಅದನ್ನು ಕ್ರಮವಾಗಿ ಕಡಿಮೆ ಮಾಡಬೇಕು. ಮತ್ತು ಅವರಿಗೆ ಬೇರೆ

ಉದ್ಯೋಗವನ್ನು ಒದಗಿಸಬೇಕು. ಕಳೆದ 10 ವರ್ಷಗಳ ಅವಧಿಯಲ್ಲಿ ಮೈಸೂರು ರಾಜ್ಯದ ಔದ್ಯೋಗಿಕ ಅಭಿವೃದ್ಧಿ ಯಾವ ಪ್ರಮಾಣದಲ್ಲಿ ಆಗಬೇಕಾಗಿತ್ತೋ, ಯಾವ ಪ್ರಮಾಣದಲ್ಲಿ ಆಗಬೇಕೆಂದು ನಾವು ನಿರೀಕ್ಷಣೆ ಮಾಡಿದ್ದೆವೋ ಆ ಪ್ರಮಾಣದಲ್ಲಿ ಆಗಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ವಿದ್ಯುಚ್ಛಕ್ತಿ ಅಭಾವ ಇತ್ತು, ಇಂದು ಶರಾವತಿಯ ಯೋಜನೆ ಕೈಗೂಡಿದೆ; ಮತ್ತು ನಮಗೆ ಅದರಿಂದ ಹೇರಳವಾಗಿ ವಿದ್ಯುಚ್ಛಕ್ತಿ ಸಿಕ್ಕುತ್ತಿದೆ. ಮಾನ್ಯ ಸಿದ್ದವೀರಪ್ಪನವರ ಒಂದು ಪ್ರಶ್ನೆಗೆ ನಾನು ಈಗ ಉತ್ತರವನ್ನು ಹೇಳುತ್ತೇನೆ. ನಾವು ಸಾಲ ಮಾಡಿ ಶರಾವತಿಯ ಯೋಜನೆಯನ್ನು ಕಾರ್ಯಗತ ಮಾಡದಿದ್ದರೆ ಇಷ್ಟೊಂದು ಹೇರಳವಾಗಿ ನಮಗೆ ವಿದ್ಯುಚ್ಛಕ್ತಿ ಸಿಕ್ಕುತ್ತಾ ಇರಲಿಲ್ಲ. ಈ ವಿದ್ಯುಚ್ಛಕ್ತಿ ಈಗ ಔದ್ಯೋಗಿಕ ಅಭಿವೃದ್ಧಿಗೆ ನಾಂದಿಯಾಗಿ ಪರಿಣಮಿಸಿದೆ. ಈ ಶರಾವತಿ ಯೋಜನೆಗೆ 100—110 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದರೂ ಕೂಡ ಎಲ್ಲಾ ಜನರೇಟರುಗಳ ಕಮಿಷನ್ ಆದಮೇಲೆ ಈ ಒಂದು ಯೋಜನೆಯಿಂದ 20 ಕೋಟಿ ರೂಪಾಯಿಗಳ ಆದಾಯ ನಮಗೆ ಬರುತ್ತದೆ. 5 ವರ್ಷಗಳಲ್ಲಿ ಶರಾವತಿ ಯೋಜನೆಗೆ ನಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೇವೋ ಅಷ್ಟು ಹಣ ಆದರಿಂದ ಉತ್ಪತ್ತಿಯಾಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಿಪರೀತವಾಗಿ ಸಿಕ್ಕುವುದರಿಂದ ಇಡೀ ದೇಶದ ಗಮನ ಅದರಲ್ಲೂ ಮುಖ್ಯವಾಗಿ ಯಾರು ಯಾರು ಔದ್ಯೋಗಿಕ ರಂಗದಲ್ಲಿ ದುಡಿಯುತ್ತಿದ್ದಾರೋ ಅವರ ಗಮನವನ್ನು ಮೈಸೂರು ಸೆಳೆದಿದೆ. ಈಗ ಅನೇಕ ಮಾನ್ಯ ಸದಸ್ಯರು ಟೀಕೆ ಮಾಡಿದರು, ಮುಖ್ಯಮಂತ್ರಿಗಳು ಮುಂಬೈಗೆ ಏತಕ್ಕೆ ಹೋಗಿದ್ದರು, ಕಲ್ಕತ್ತಾಕ್ಕೆ ಏತಕ್ಕೆ ಹೋಗಿದ್ದರು, ಅವರ ಮನೆಯ ಬಾಗಿಲಿಗೆ ನಾವು ಏತಕ್ಕೆ ಹೋಗಬೇಕಾಗಿತ್ತು, ನಮ್ಮಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡತಕ್ಕ ಜನರು ಇಲ್ಲವೇ ಎಂದು ಇತ್ಯಾದಿಯಾಗಿ ಹೇಳಿದರು. ಮೈಸೂರು ರಾಜ್ಯದಲ್ಲಿ ಯಾರೂ ಸಣ್ಣ ಉದ್ಯಮವಾಗಲೀ, ಮಧ್ಯಮವರ್ಗದ ಉದ್ಯಮವಾಗಲೀ ಮಾಡುವುದಕ್ಕೆ ಮುಂದೆ ಬಂದರೆ ಅವರಿಗೆ ಪ್ರಥಮ ಪ್ರಾಶಸ್ತ್ಯ ಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಪುನಃ ಪುನಃ ಹೇಳಿದ್ದಾರೆ. ನಮ್ಮವರೇ ಯಾರಾದರೂ ಉದ್ಯಮವನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಯಾವ ತರಹ ಸೌಕರ್ಯವನ್ನಾದರೂ ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಸಾಕಷ್ಟು ಬಂಡವಾಳ ಇಲ್ಲದೇ ಇರುವಾಗ, ಇನ್ನು ಇತರ ಸಾಧನಮಾರ್ಗಗಳು ಇಲ್ಲದೇ ಇರುವಾಗ ಮೈಸೂರಿನವರನ್ನು ಬಿಟ್ಟು ಬೇರೆ ಯಾರಿಗೂ ಕೊಡುವುದಿಲ್ಲ ಎಂದು ಹೇಳಿದರೆ ಅದಕ್ಕಿಂತ ನಗೆಪಾಟಲು, ಹಾನಿಕರ ಬೇರೆ ಯಾವ ಮಾತೂ ಆಗುವುದಿಲ್ಲ. ಮಹಾರಾಷ್ಟ್ರ ಷಹರಗಳಲ್ಲಿ, ದೊಡ್ಡ ದೊಡ್ಡ ಉದ್ಯಮಗಳು ಇವೆ. ಮಹಾರಾಷ್ಟ್ರದ ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಕಾರಣವೇನು, ಪಶ್ಚಿಮ ಬಂಗಾಳದ ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಕಾರಣವೇನು, ಮದ್ರಾಸ್ ರಾಜ್ಯದ ಆರ್ಥಿಕಸ್ಥಿತಿ ಉತ್ತಮವಾಗುವುದಕ್ಕೆ ಕಾರಣವೇನು ಎಂದು ನೋಡಬೇಕು. ಒಟ್ಟು ನಮ್ಮ ದೇಶದಲ್ಲಿ ಇನ್‌ಕಂಟ್ಯಾಕ್ಸ್ ಕೊಡುವುದರಲ್ಲಿ ಉತ್ಪತ್ತಿ ಸುಮಾರು 100ಕ್ಕೆ 48 ರಷ್ಟು 50ರಷ್ಟು ಪಶ್ಚಿಮ ಬಂಗಾಳದಿಂದ ಬರುತ್ತದೆ. 30ರಷ್ಟು ಮಹಾರಾಷ್ಟ್ರದಿಂದ ಬರುತ್ತದೆ. 10ರಷ್ಟು ಮದ್ರಾಸಿನಿಂದ ಬರುತ್ತದೆ. 150 ಕೋಟಿ ರೂಪಾಯಿಗಳಷ್ಟು ಇನ್‌ಕಂಟ್ಯಾಕ್ಸ್ ಪಶ್ಚಿಮ ಬಂಗಾಳದಿಂದ ಬರುತ್ತದೆ.

10-00 A.M.

ಅದಕ್ಕಾಗಿ ಇಂದು ಆ ರಾಜ್ಯಗಳ ಆರ್ಥಿಕಸ್ಥಿತಿ ಉತ್ತಮವಾಗಿದೆ. ಔದ್ಯೋಗಿಕಾಭಿವೃದ್ಧಿಯ ಮೂಲಕ ಕೇವಲ ಜನರಿಗೆ ಉದ್ಯೋಗಗಳನ್ನು ಒದಗಿಸಿಕೊಡುವುದು ಅಷ್ಟೆ ಅಲ್ಲ; ಅದರಿಂದ ಜನರ ವರಮಾನವೂ ಹೆಚ್ಚಾಗುತ್ತದೆ, ಸರ್ಕಾರದ ವರಮಾನವೂ ಹೆಚ್ಚಾಗುತ್ತದೆ. ದೇಶದ ಏಳಿಗೆ ಇದರಿಂದ ಬೆಳೆಯುತ್ತದೆ. ಮೈಸೂರಿನವರು ಯಾರೂ ಬಾರದೇ ಇದ್ದರೆ ಬೇರೆ ಯಾರಿಗೂ ಕೊಡುವುದಿಲ್ಲವೆಂದು ಹೇಳಿದರೆ ಅದು ಒಳ್ಳೆಯ ನೀತಿಯಾಗುತ್ತದೆಯೇ ಎನ್ನುವುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಮೊನ್ನೆ ಚರ್ಚೆಯಲ್ಲಿ ಭಾಗವಹಿಸುವಾಗ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಮಾಡಬೇಕು ಎಂಬುದಾಗಿ ಹೇಳಿದರು. ನಿಜವಾಗಿ ಸೋಷಿಯಾಲಿಜಂ ಜಾರಿಗೆ ತರಬೇಕೆಂದು ಇದ್ದರೆ ಆ ಒಂದು ಮಾತಿಗೂ ಈಗಿನ ಮಾತಿಗೂ ಎಷ್ಟು ವ್ಯತ್ಯಾಸವಾಗಿದೆ ಎಂಬುದನ್ನು ಕೇಳಿದರೆ ನಾನು ಅದರ ಬಗ್ಗೆ ಏನು ಹೇಳಬೇಕೋ ನನಗೆ ಗೊತ್ತಿಲ್ಲ. ಸೋಷಿಯಲಿಜಂ ಏನು ಎಂಬುದನ್ನು ದಯವಿಟ್ಟು ಮಾನ್ಯ ಸದಸ್ಯರು ತಿಳಿದುಕೊಂಡರೆ ಚೆನ್ನಾಗಿರುತ್ತದೆ. ಇಂದು ಕಮ್ಯೂನಿಸ್ಟ್ ರಾಜ್ಯಗಳಲ್ಲಿಯೂ ಕೂಡ ಆ ಒಂದು ಸೋಷಿಯಲಿಜಂ ಬಂದಿದೆ. ಕೆಲವು ರಾಜ್ಯಗಳಲ್ಲಿ ಅದಿನ್ನೂ ಬಂದಿಲ್ಲ. ಕೇರಳಾದಲ್ಲಿ ಕಮ್ಯೂನಿಸ್ಟ್ ರಾಜ್ಯವಿದೆ. ಅಲ್ಲಿ ಶ್ರೀ ನಂಬೂದರಿಪಾದ್ ಅವರು ಇಡೀ ದೇಶದ ಉದ್ಯೋಗಿಗಳನ್ನು ಕರೆಯುತ್ತಿದ್ದಾರೆ. ಅಲ್ಲಿಯ ಜನರಿಗೆ ಹೆಚ್ಚಿಗೆ ಉದ್ಯೋಗಗಳು ಬೇಕು. ಅಲ್ಲಿ ಕಚ್ಚಾ ಪದಾರ್ಥಗಳನ್ನೆಲ್ಲಾ ಎಕ್ಸ್‌ಪ್ಲಾಯಿಟ್

(ಶ್ರೀ ರಾಮಕೃಷ್ಣ ಹೆಗಡೆ)

ಮಾಡಬೇಕು, ಅದರಿಂದ ರಾಜ್ಯದ ಏಳಿಗೆಯನ್ನು ಸಾಧಿಸಬೇಕು ಎಂಬುದಾಗಿ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮಲ್ಲಿ ಏನು ಉತ್ಪತ್ತಿಯಾಗುತ್ತದೆಯೋ ಅದನ್ನು ವಿತರಣೆ ಮಾಡತಕ್ಕ ಕಾಲದಲ್ಲಿ ಸರ್ಕಾರ ಯಾವ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಯಾವ ಒಂದು ಹತೋಟಿಯನ್ನಿಟ್ಟುಕೊಂಡು ಮಾಡಬೇಕೋ ಅದು ನಮ್ಮ ರಾಜ್ಯ ಸರ್ಕಾರದಲ್ಲಿದೆಯೇ ಕೇಂದ್ರ ಸರ್ಕಾರದಲ್ಲಿಯೇ ಎಂಬುದು ಮುಖ್ಯ. ಇಂದು ಅದೇ ನಮ್ಮಲ್ಲಿರತಕ್ಕ ಒಂದು ದೊಡ್ಡ ಸಮಸ್ಯೆ ಎಂಬುದಾಗಿ ನಾನು ಹೇಳುತ್ತೇನೆ. ನಾವು ಉತ್ಪಾದನೆಯನ್ನು ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಾಡಬೇಕು. ವ್ಯವಸಾಯ ಕ್ಷೇತ್ರದಲ್ಲೂ ಕೈಗಾರಿಕಾ ಕ್ಷೇತ್ರದಲ್ಲೂ ನಾಷ್ಟ್ರ ಉತ್ಪಾದನಾಶಕ್ತಿಯನ್ನು ಹೆಚ್ಚಿಸಬೇಕು. ಅದನ್ನು ಎಂದೂ ಮರೆಯಕೂಡದು. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಕಚ್ಚಾ ಸಾಮಾನುಗಳು ಇರುವಾಗ, ಮತ್ತು ಬೇಕಾದಷ್ಟು ವಿದ್ಯುಚ್ಛಕ್ತಿ ಪೂರೈಕೆ ಇರುವಾಗ, ಇಂತಹ ಸಮಯವನ್ನು ಈಗ ಉಪಯೋಗಿಸಿಕೊಳ್ಳದೇ ಹೋದರೆ ನಿಜವಾಗಿ ನಮಗೆ ಔದ್ಯೋಗಿಕಾಭಿವೃದ್ಧಿಯನ್ನು ಮಾಡುವುದಕ್ಕೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಈಗ ದಯಮಾಡಿ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ನಾನು ಮತ್ತು ಮುಖ್ಯ ಮಂತ್ರಿಗಳು ಬೊಂಬಾಯಿಗೆ ಮತ್ತು ಕಲ್ಕತ್ತಾಕ್ಕೆ ಹೋಗಿ ಬಂದಿರುವುದರಿಂದ ಅಲ್ಲಿ ಏನಾಗಿದೆ ಎಂಬುದನ್ನು ಮಾನ್ಯ ಸದಸ್ಯರಿಗೆ ಹೇಳಬೇಕಾಗಿದೆ. ಕಳೆದ 4 ವರ್ಷಗಳ ಅವಧಿಯಲ್ಲಿ ಒಟ್ಟು ಈಗಾಗಲೇ ಎಷ್ಟೋ ಯೋಜನೆಗಳು ಮಂಜೂರಾಗಿ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್‌ನಲ್ಲಿ 26 ಕೋಟಿ ರೂಪಾಯಿಗಳಷ್ಟು ಇನ್‌ವೆಸ್ಟ್ ಮಾಡಿದ್ದರಿಂದ ಅನೇಕ ಕಾರ್ಖಾನೆಗಳು ಹಾಗೂ ಯೋಜನೆಗಳು ಆಗುತ್ತಾ ಇವೆ. They are under various stages of implementation.

ಶ್ರೀ ಎಚ್. ಸಿದ್ದವೀರಪ್ಪ.—ಅವು ಪೂರ್ಣವಾಗಿ ಇಂಪ್ಲಿಮೆಂಟ್ ಆಗಿವೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—They are under progress. 26 ಕೋಟಿ ರೂಪಾಯಿಗಳಷ್ಟು ಪ್ರಾಜೆಕ್ಟ್‌ಗಳು ಅಭಿವೃದ್ಧಿಯಾಗುತ್ತಿರುವುದರ ಜೊತೆಗೆ 69 ಕೋಟಿ ರೂಪಾಯಿಗಳ ಬೇರೆ ಬೇರೆ ಪ್ರೊಪೋಸಲ್‌ಗಳನ್ನು ನಾವು ಎಗ್ಸಾಮಿನ್ ಮಾಡುತ್ತಿದ್ದೇವೆ. They are under various stages of scrutiny. 69 ಕೋಟಿ ರೂಪಾಯಿಗಳನ್ನು ಪಬ್ಲಿಕ್ ಸೆಕ್ಟರಿನಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದೇವೆ. ಆ ಮೇಲೆ ಈ ಸರ್ಕಾರ ಈ ನಾಲ್ಕು ವರ್ಷಗಳಲ್ಲಿ ಕೈಗೊಂಡಿರತಕ್ಕ ಒಟ್ಟು ಬೇರೆ ಬೇರೆ ಔದ್ಯೋಗಿಕ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮವಾಗಿ ಸುಮಾರು 11 ಕೋಟಿ ರೂಪಾಯಿಗಳಷ್ಟು ಬೇರೆ ಬೇರೆ ಕೆಲಸಗಳು ಇವತ್ತು ನಡೆಯುತ್ತಾ ಇವೆ. 39 ಕೋಟಿ ರೂಪಾಯಿಗಳಷ್ಟು ಬಂಡವಾಳದ ಕೆಲಸ ಇವತ್ತು ಸ್ಕ್ರೂಟಿನಿಯಲ್ಲಿದೆ. ಇನ್ನು ಪ್ರೈವೇಟ್ ಸೆಕ್ಟರ್‌ನಲ್ಲಿ ನೋಡಿದರೆ 114 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಬಂಡವಾಳದ ಕೆಲಸ ಕಾರ್ಯಗಳು ನಡೆಯುತ್ತಾ ಇವೆ. They are also under various stages of implementation. ಸುಮಾರು 47 ಕೋಟಿ ರೂಪಾಯಿಗಳಷ್ಟು ಒಟ್ಟು ಬಂಡವಾಳವನ್ನು ಕಾರ್ಖಾನೆಗಳ ಅಭಿವೃದ್ಧಿಗಾಗಿ ಖರ್ಚುಮಾಡುತ್ತಿದ್ದೇವೆ. ಹೀಗೆ ಒಟ್ಟು 150 ಕೋಟಿ ರೂಪಾಯಿಗಳಷ್ಟು ಕೆಲಸಗಳು They are under implementation. ಇತರ ಪ್ರೊಪೋಸಲ್ಸ್ ಸಹ ನಾವು ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಆದರೂ 303 ಕೋಟಿ ರೂಪಾಯಿಗಳಷ್ಟು ಕೆಲಸಗಳು ಈ ಮೈಸೂರು ರಾಜ್ಯದಲ್ಲಿ ಇವತ್ತು ಆಗಬೇಕಾಗಿವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ನಮ್ಮ ಅಪೇಕ್ಷೆ ಏನಿದೆಯೆಂದರೆ, ಕನಿಷ್ಟಪಕ್ಷ 500 ಕೋಟಿ ರೂಪಾಯಿಗಳಷ್ಟು ಬಂಡವಾಳದ ಕೆಲಸಗಳನ್ನು ಮಾಡಿಸಬೇಕೆಂದಿದ್ದೇವೆ. ಪಬ್ಲಿಕ್ ಸೆಕ್ಟರ್‌ನಲ್ಲಾಗಲೀ, ಮೈಸೂರು ಸರ್ಕಾರದಲ್ಲಾಗಲೀ ಅಥವಾ ಕೇಂದ್ರ ಸರ್ಕಾರದಲ್ಲಾಗಲೀ ಅಥವಾ ಪ್ರೈವೇಟ್ ಸೆಕ್ಟರ್‌ನಲ್ಲಾಗಲೀ ಒಟ್ಟು ಮೈಸೂರು ರಾಜ್ಯದ ಬಂಡವಾಳ 500 ಕೋಟಿ ರೂಪಾಯಿಗಳಷ್ಟು ಇದ್ದರೆ ಅದರಿಂದ ಎಷ್ಟರಮಟ್ಟಿಗೆ ಉದ್ಯೋಗಗಳು ಬೆಳೆಯುತ್ತವೆ, ಪ್ರಗತಿ ಎಷ್ಟು ಆಗುತ್ತದೆ, ಉತ್ಪಾದನೆ ಎಷ್ಟರಮಟ್ಟಿಗೆ ಹೆಚ್ಚುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ವಿಚಾರ ಮಾಡಬೇಕಾಗಿದೆ. ಇದೇ ಸಂದರ್ಭದಲ್ಲಿ ನಿನ್ನೆ ಒಂದು ಪ್ರಶ್ನೆಯನ್ನು ಇದೇ ಸಭೆಯಲ್ಲಿ ಕೇಳಿದರು. ಮುಖ್ಯ ಮಂತ್ರಿಗಳು ಮತ್ತು ಅರ್ಥ ಸಚಿವರು ವಿದೇಶಗಳಿಗೆ ಹೋಗುತ್ತಾರೆ, ಯಾರ ಖರ್ಚಿನಲ್ಲಿ ಹೋಗುತ್ತಾರೆ, ಏತಕ್ಕೆ ಹೋಗುತ್ತಾರೆ, ಎಲ್ಲೆಲ್ಲಿ ಹೋಗುತ್ತಾರೆಂದು ಶ್ರೀ ಶಿವಪ್ಪನವರು ಕೇಳಿದರು.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ವರ್ತಮಾನ ಪತ್ರಿಕೆಗಳಲ್ಲಿ ಆ ಸುದ್ದಿ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ನಾನು ವಿದೇಶಗಳಿಗೆ ಹೋಗುವ ವಿಚಾರ ಯಾವುದೂ ನಿರ್ಧಾರವಾಗಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಹಾಗಾದರೆ ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಸುಳ್ಳೆ ?

ಶ್ರೀ ರಾಮಕೃಷ್ಣ ಹೆಗಡೆ.—ವರ್ತಮಾನ ಪತ್ರಿಕೆಯ ವಿಚಾರವಾಗಿ ನಾನು ಈಗ ಏನು ಹೇಳುತ್ತಾ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ವರ್ತಮಾನ ಪತ್ರಿಕೆಯಲ್ಲಿ ಬಂದುದು ನಿಜವೋ ಸುಳ್ಳೋ ಎಂದು ಕೇಳುತ್ತಾರೆ. ಮಂತ್ರಿಗಳನ್ನು ಕೇಳಿ ತಿಳಿದುಕೊಳ್ಳಬೇಕೆಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ವರ್ತಮಾನ ಪತ್ರಿಕೆಯಲ್ಲಿ ಬರುವುದು That is the only medium of Communication. ಆದ್ದರಿಂದ ವರ್ತಮಾನ ಪತ್ರಿಕೆಯಲ್ಲಿ ಬಂದುದನ್ನು ಕೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ವರ್ತಮಾನ ಪತ್ರಿಕೆಗಳಲ್ಲಿ ಅಧಿಕೃತವಾಗಿ ಬಂದಿದೆಯೆಂದು ನನಗನ್ನಿಸುವುದಿಲ್ಲ. ಹೀಗಾಗಿ ಆ ವಿಚಾರವಾಗಿ ಯಾರೂ ಮಾತನಾಡುತ್ತಾ ಇಲ್ಲ. ಮುಖ್ಯ ಮಂತ್ರಿಗಳು ಅಲ್ಲಿಗೆ ಹೋದರೆ ಅದರಿಂದ ಪ್ರಯೋಜನವಾಗುತ್ತದೆಂದರೆ ಅವರು ಹೋಗಬೇಕು. ಮಂತ್ರಿಗಳಲ್ಲಿ ಯಾರಾದರೂ ಹೋದರೆ ಅದರಿಂದ ಪ್ರಯೋಜನವಾಗುತ್ತದೆಂದರೆ ಅವರು ಹೋಗಬೇಕು. ಅಥವಾ ಯಾರಾದರೂ ಸದಸ್ಯರನ್ನು ಕಳುಹಿಸುವುದರಿಂದ ಪ್ರಯೋಜನವಿದ್ದರೆ ಅವರನ್ನು ಕಳುಹಿಸಬೇಕು. ಆದ್ದರಿಂದ ಅದನ್ನು ಇಲ್ಲಿ ದೊಡ್ಡದಾಗಿ ಪ್ರಸ್ತಾಪ ಮಾಡುವ ಅಗತ್ಯವೇ ಇರಲಿಲ್ಲ. ಬಡ್ಜೆಟ್ಟಿನಲ್ಲಿ ನಾನು ಮೂರು ವಿಚಾರಗಳನ್ನು ಗ್ರಹಿಸಿ ಅದನ್ನು ತಯಾರುಮಾಡಿದ್ದೇನೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮೊದಲನೆಯದಾಗಿ ಈ ವರ್ಷದ ಮಳೆ ಮತ್ತು ಹವಾಮಾನಗಳು ಸಾಮಾನ್ಯವಾಗಿ ಇರುತ್ತದೆನ್ನುವ ಒಂದು ಆಶೆ ನಮ್ಮ ಇಡೀ ದೇಶದ ಆರ್ಥಿಕ ಪರಿಸ್ಥಿತಿ ಮೇಲೆ ಅವಲಂಬಿಸಿದೆಯೆಂದು ಹೇಳಿದರೆ ಅದು ಏನೂ ಅತಿಶಯೋಕ್ತಿಯಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಬರ ಬಂದು ಬಹಳವಾದ ಉತ್ಕಟ ಪರಿಸ್ಥಿತಿಯನ್ನುಂಟುಮಾಡಿದೆ. ಮೈಸೂರಿನಲ್ಲಿ ಈ ವರ್ಷ ಇಲ್ಲಿಯವರೆಗೂ ಮಳೆ ನಮಗೆ ಸಾಮಾನ್ಯವಾಗಿ ಅನುಕೂಲವಾಗುವಂತೆ ಆಗಬಹುದು ಎಂದು ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಮಳೆ ಇಲ್ಲಿ ಇನ್ನೂ ಆಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯ ವಿಷಯ ಎರಡು ಮೂರು ಬಾಬುಗಳಲ್ಲಿ ಹೆಚ್ಚು ಉತ್ಪಾದನೆ ಮಾಡಬೇಕೆಂದು ಮಾಡಿದ್ದಾರೆ. ಯಾವುದೇ ಒಂದು ಬಾಬಿನಲ್ಲಿ ಸರ್ಕಾರಕ್ಕೆ ಎಷ್ಟು ಉತ್ಪನ್ನ ಸಿಗಬೇಕೋ ಅಷ್ಟು ಸಿಗದಿದ್ದರೆ ಪುನಃ ನಮ್ಮ ಬಡ್ಜೆಟ್ಟಿನಲ್ಲಿ ಖೋತ ಆಗುವ ಸಂಭವ ಬರಬಹುದು. ಅದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಮೂರನೆಯದು ಬಹಳ ಮುಖ್ಯವಾದ ವಿಚಾರ. ಅದೇನೆಂದರೆ, ಸರ್ಕಾರೀ ಕಾರ್ಯಾಚರಣಿ ವಿಧಾನ ಮತ್ತು ಅವರಿಗೆ ಕೊಡುವ ತುಟ್ಟಿ ಭತ್ಯವಾಗಲಿ ಅದನ್ನು ಯಾವ ರೀತಿಯಲ್ಲಿಯೂ ಪುನರ್ವಿಮರ್ಶೆ ಆಗಲಿಕ್ಕಿಲ್ಲ ಎಂದು ಹೇಳುವುದಕ್ಕೆ ಒಂದು ಭಯವಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೇಂದ್ರ ಸರಕಾರದವರು ನ್ಯಾಯಮೂರ್ತಿ ಗಜೇಂದ್ರ ಗಡಕರ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕ ಮಾಡಿದ್ದರು. ನಾನು ಬಜೆಟ್ ಮಂಡಿಸುವ ಸಮಯದ ಮುಂದೆ ಈ ಪೇ ಕಮಿಷನ್ ವರದಿ ಪ್ರಸಿದ್ಧವಾಗಿದೆ ಮತ್ತು ಅದನ್ನು ಕೇಂದ್ರ ಸರಕಾರ ಒಪ್ಪಿಕೊಂಡಿದೆ. ಕೇಂದ್ರ ಸರಕಾರದ ನೌಕರರಿಗೆ ಇಂತಿಷ್ಟು ಪ್ರಮಾಣದಲ್ಲಿ ತುಟ್ಟಿ ಭತ್ಯ ಕೊಡಬೇಕು ಹಾಗೂ ಇಂಡೆಕ್ಸ್ ಯಾವ ರೀತಿ ಏರುತ್ತದೆಯೋ ಅದಕ್ಕೆ ಅನುಸಾರವಾಗಿ ತುಟ್ಟಿ ಭತ್ಯ ಸಹ ಏರಿಸುತ್ತಾ ಹೋಗಬೇಕು ಎಂದು ಅವರು ಶಿಫಾರಸ್ಸು ಮಾಡಿದ್ದಾರೆ. ಈ ಬಗ್ಗೆ ಕೇಂದ್ರ ಸರಕಾರ ಇನ್ನೂ ಯಾವ ನಿರ್ಧಾರವನ್ನೂ ಮಾಡಿಲ್ಲ. ನಾಡಿದ್ದು ಡಿಲ್ಲಿಯಲ್ಲಿ ಈ ಬಗ್ಗೆ ವಿಚಾರ ವಿನಿಮಯ ಮಾಡಲು ಕೇಂದ್ರ ಸರಕಾರದ ಉಪ ಪ್ರಧಾನ ಮಂತ್ರಿಗಳು ಒಂದು ಮೀಟಿಂಗ್ ಕರೆದಿದ್ದಾರೆ. ಬಹುಶಃ ಈ ವಿಚಾರ ಅಲ್ಲಿ ಚರ್ಚೆಯಾಗಿ ಕೊನೆಯ ನಿರ್ಧಾರ ತೆಗೆದುಕೊಳ್ಳುತ್ತಾರೆಂದು ಅನಿಸುತ್ತದೆ. ಈ ಬಗ್ಗೆ ನಾನು ಒಂದು ಮಾತು ಹೇಳಬೇಕಾಗಿದೆ. ಸರಕಾರದ ನೌಕರರಿಗೆ ಸಮಸ್ಯೆ ಇಲ್ಲ ಎಂದು ನಾನು ಯಾವಾಗಲೂ ಹೇಳಿಲ್ಲ. ಸರಕಾರಿ ನೌಕರರಿಗೆ ತಿಂಗಳಿಗೆ ನಿರ್ದಿಷ್ಟವಾದ ಒಂದು ಸಂಬಳ ಸಿಕ್ಕುತ್ತದೆ. ಒಂದೆರಡು ತಿಂಗಳಲ್ಲಿ ಬೆಲೆ ಹೆಚ್ಚುತ್ತಾ ಹೋದರೆ ಮನೆ ಖರ್ಚು ಸರಿದೂಗಿಸಲು ಅವರಿಗೆ ಸಾಧ್ಯವಾಗುವುದಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಬೆಲೆ ಏರಿದ ಹಾಗೆ ಅವರ ತುಟ್ಟಿ ಭತ್ಯ ಏರುತ್ತಾ ಹೋದರೆ ಇದೊಂದು ವಿಷ ಚಕ್ರದ ಹಾಗೆ ಕೊನೆಯಿಲ್ಲದ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತೇವೆ. ಕೇಂದ್ರ ಸರಕಾರವು ಯಾವುದೇ ರೀತಿಯ ಹೆಚ್ಚಳವನ್ನು ಅವರು

(ಶ್ರೀ ರಾಮಕೃಷ್ಣ ಹೆಗಡೆ)

ತುಟ್ಟಿ ಭತ್ಯದಲ್ಲಿ ಕೊಟ್ಟರೆ ಅದಕ್ಕೆ ಅನುಗುಣವಾಗಿ ರಾಜ್ಯ ಸರಕಾರವು ಸಹ ತನ್ನ ನೌಕರರಿಗೆ ಕೊಡಲೇಬೇಕಾಗುತ್ತದೆ. ಇದಕ್ಕೆ ಬೇರೆ ಮಾರ್ಗವೇ ಇಲ್ಲ. ಗಜೇಂದ್ರಗಡಕರ ಕಮೀಷನ್ನಿನವರು ತಮ್ಮ ವರದಿಯಲ್ಲಿ ಒಂದು ಮಾತಿನ ಬಗ್ಗೆ ಏನು ಶಿಫಾರಸ್ಸು ಮಾಡಿದ್ದಾರೆ ಎಂಬುದನ್ನು ಈ ಸಭೆಯ ಮಾನ್ಯ ಸದಸ್ಯರೆಲ್ಲರ ಗಮನಕ್ಕೆ ತರಲು ಬಯಸುತ್ತೇನೆ. ಅದು ಈ ರೀತಿ ಇದೆ :

"On principle we find it difficult to sustain any disparity with regard to the percentage of neutralisation at which dearness allowance should be paid to Government's employees who are working under the Central Government or under different State Governments. Since in our view employees who are getting salaries at or a little above the subsistence level are entitled to be protected against rise in prices of essential commodities, the extent of neutralisation legitimately admissible in the case of these categories must be uniform wherever the employees may be working and whoever pays them. We are therefore unable to resist the point urged before us by the State Governments and the representatives of employees in this behalf. In the result our specific finding on this issue is that there will be no justification for disparity in the rates at which dearness allowance should be paid to the employees of the Central Government and the employees of the State Governments."

ಇದು ನಿರ್ವಿವಾದ ವಿಚಾರವಾಗಿದೆ. ಹಿಂದಿನ ಸಲ ಬಜೆಟ್ ಮಂಡಿಸುತ್ತಾ ಮಾತನಾಡಿದಾಗ್ಗೆ ಈ ವಿಚಾರ ಪ್ರಸ್ತಾಪಿಸಿದ್ದು, ಆಗ್ಗೆ ಹೇಳಿದ್ದು ಇವತ್ತು ಕೂಡ ಅದೇ ರೀತಿ ಹೇಳುವುದಕ್ಕೆ ಸಾಧ್ಯವಿದೆ. ನಾಲ್ಕನೇ ಫೈನಾನ್ಸ್ ಕಮಿಷನ್ನಿನವರು ತಮ್ಮ ವರದಿಯಲ್ಲಿ ಏನು ಹೇಳಿದ್ದಾರೆ ಎಂಬುದನ್ನು ನಾನು ಹಿಂದೆ ಪ್ರಸ್ತಾಪಿಸಿದ್ದೆ. ಆ ಒಂದು ಮಾತನ್ನು ಪುನಃ ಓದಿ ಹೇಳುತ್ತೇನೆ :

"The assessment of needs of the type undertaken by us cannot obviously take into account the various items that might emerge during the next five years and which cannot be foreseen at this time. An appropriate procedure will have to be evolved to take such needs into account and to afford Central assistance wherever necessary."

ನಿನ್ನೆ ಶ್ರೀಮಾನ್ ಘೋರ್ಪಡೆಯವರು ಮಾತನಾಡುತ್ತಾ ಹಿಂದಕ್ಕೆ ಮಾಡಿದ ಸೂಚನೆಯನ್ನು ಪುನಃ ಸೂಚನೆ ಮಾಡಿದರು. ಐದು ವರ್ಷಕ್ಕೊಮ್ಮೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ಫೈನಾನ್ಸ್ ಕಮಿಷನ್ ಅವರು ಬೇರೆ ಬೇರೆ ರಾಜ್ಯ ಸರಕಾರಗಳ ಆರ್ಥಿಕ ಪರಿಸ್ಥಿತಿ ಪರಿಶೀಲಿಸಿ ರೆವೆನ್ಯೂ ಎಕ್ಸ್‌ಪೆಂಡಿಚರ್ ನೋಡಿಕೊಂಡು ತಮ್ಮ ಶಿಫಾರಸ್ಸು ಮಾಡುತ್ತಾರೆ. ಐದು ವರ್ಷದ ಅವಧಿಯಲ್ಲಿ ಹೊಸ ಹೊಸ ಸಮಸ್ಯೆಗಳು ತೊಂದರೆಗಳು ಬರುತ್ತವೆ. ಅದರ ಬಗ್ಗೆ ಯಾವ ಪರಿಹಾರ ಇಲ್ಲ ಎಂದು ಹೇಳಿದರು. ಫೈನಾನ್ಸ್ ಕಮಿಷನ್ ಇದು ಒಂದು ಕಂಟಿನ್ಯೂಅಸ್ ಬಾಡಿ ಇದೆ ಎಂದು ಸಹ ಹೇಳಿದರು. ಈ ವಿಚಾರ ನಾನು ಹಿಂದೆ ಹೇಳಿದ್ದೇನೆ. ಕೇಂದ್ರ ಸರಕಾರದ ಜೊತೆಗೆ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ಮಾತನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅದೇನೆಂದರೆ ಸೆಂಟ್ರಲ್ ಗವರ್ನಮೆಂಟಿಗೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ಇರುವ ಜವಾಬ್ದಾರಿಗಳಿಗೆ ಅನುಗುಣವಾಗಿ ಹೆಚ್ಚು ರಿಸೋರ್ಸಿಸ್ ಲಭ್ಯವಿಲ್ಲ. ರಾಜ್ಯ ಸರಕಾರಗಳಿಗೂ ಕೂಡ ಇರುವ ಜವಾಬ್ದಾರಿಗಳಿಗೆ ಅನುಗುಣವಾಗಿ ರಿಸೋರ್ಸಿಸ್ ಇಲ್ಲ. ಕಾನ್ಸ್ಟಿಟ್ಯೂಷನ್ನಿನಲ್ಲಿ ಇರತಕ್ಕ ಇದೊಂದು ದೋಷ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಇದೊಂದು ದೋಷ ಇದೆ. ರಾಜ್ಯ ಸರಕಾರವು ಜನತೆಯ ಸಮೀಪಕ್ಕೆ ಇರತಕ್ಕಂಥ ಸರಕಾರ. ಜನರ ಕಷ್ಟ ಹಾಗೂ ಸಮಸ್ಯೆಗಳನ್ನು ಬಿಡಿಸುವ

ಪ್ರೈಮರಿ ಅಂದರೆ ಪ್ರಾಥಮಿಕ ಜವಾಬ್ದಾರಿ ರಾಜ್ಯ ಸರಕಾರದ ಮೇಲೆ ಬೀಳುತ್ತದೆ. ಅದು ಕೇಂದ್ರ ಸರಕಾರದ ಮೇಲೆ ಬೀಳುವುದಿಲ್ಲ. ಕೇಂದ್ರ ಸರಕಾರದ ಮೇಲೆ ಎರಡು ಮೂರು ಸಲ ಈ ವಿಚಾರದ ಬಗ್ಗೆ ಒತ್ತಾಯ ಮಾಡಿದ್ದೇವೆ. ಇದನ್ನು ಪುನಃ ಪರ್ಯಾಲೋಚನೆ ಮಾಡಬೇಕಾಗಿದೆ. ಒಂದು ಹೊಸ ತತ್ವ ಅಥವಾ ವಿಧಾನವನ್ನು ಅನುಸರಿಸದೇ ಇದ್ದರೆ ಈ ಕೆಲಸ ಸಾಧ್ಯವಾಗಲಿಕ್ಕಿಲ್ಲ. ಕೇಂದ್ರ ಸರಕಾರದವರು ನೌಕರರಿಗೆ ನಮ್ಮನ್ನು ಕೇಳದೆ ತುಟ್ಟಿ ಭತ್ಯ ಹೆಚ್ಚು ಕೊಡುತ್ತಾರೆ. ತುಟ್ಟಿ ಭತ್ಯ ಹೆಚ್ಚು ಕೊಡುತ್ತಾರೆ ಎಂಬುದನ್ನು ನಿರ್ಧಾರ ಮಾಡುವುದಕ್ಕೆ ಮೊದಲೇ ಮಾರ್ಕೆಟ್ಟಿನಲ್ಲಿ ಪ್ರತಿಯೊಂದು ವಸ್ತುಗಳ ಬೆಲೆ ಹೆಚ್ಚಾಗುತ್ತದೆ. ಇದನ್ನು ಬೇಕಾದರೆ ಸರ್ವೆ ಮಾಡಿಸಬಹುದು. ಕಳೆದ ಸಲ ತುಟ್ಟಿ ಭತ್ಯ ಹೆಚ್ಚು ಮಾಡಿದ ಮಾರುದಿವಸವೇ ನಿತ್ಯ ಜೀವನಕ್ಕೆ ಬೇಕಾಗುವ ಎಲ್ಲ ಪದಾರ್ಥಗಳ ಬೆಲೆ ಪ್ರಪೋರ್ಶನೇಟಾಗಿ ಜಾಸ್ತಿಯಾಯಿತು. ಆದುದರಿಂದ ಹೆಚ್ಚು ತುಟ್ಟಿ ಭತ್ಯ ಕೊಟ್ಟರೂ ಕೂಡ ಅದರಿಂದ ನೌಕರರಿಗೆ ಲಾಭವಾಗುವುದಿಲ್ಲ. It will be absorbed by the corresponding rise in prices. ಇದೊಂದು ವಿಷ ಚಕ್ರವಾಗಿದೆ. ಇದನ್ನು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಮುಖ್ಯ ಮಂತ್ರಿಗಳು ಸಹ ಇದನ್ನು ಸೂಚನೆ ಮಾಡಿದ್ದಾರೆ. ಪುನಃ ತುಟ್ಟಿ ಭತ್ಯವನ್ನು ಹೆಚ್ಚು ಮಾಡುವಾಗ ನಮ್ಮನ್ನು ಕೇಳದೇ ಮಾಡಕೂಡದು ಎಂದು ಒಂದು ಪ್ರಬಲವಾದ ವಾದ ಮಾಡಿರುವುದರಿಂದ ಈ ಸಲ ಗಜೇಂದ್ರಗಡಕರ ಕಮೀಟಿ ರಿಪೋರ್ಟ್ ಬಂದ ಕೂಡಲೇ ಕೇಂದ್ರ ಸರ್ಕಾರದ ಉಪಪ್ರಧಾನಿಯವರು ನಮ್ಮ ಮುಖ್ಯ ಮಂತ್ರಿಯವರಿಗೆ ಒಂದು ಪತ್ರ ಬರೆದರು. ನಿಮ್ಮ ಅಭಿಪ್ರಾಯ ಏನು ಇದೆ ಎಂದು ಪತ್ರ ಬರೆದಿದ್ದಾರೆ. ಅದಕ್ಕೆ ನಾವು ಏನು ಉತ್ತರ ಕೊಟ್ಟಿದ್ದೇವೆಂದರೆ, ಕೇವಲ ನಮ್ಮ ಅಭಿಪ್ರಾಯವನ್ನು ಕೇಳಿದರೆ ಸಾಲದು, ನಮ್ಮ ಅಭಿಪ್ರಾಯವನ್ನು ಕೇಳಿದ್ದೇವೆಂದು ಮನಸ್ಸಿಗೆ ಸಮಾಧಾನ ಮಾಡಿಕೊಳ್ಳಬೇಡಿ ಇದು ಸುಲಭವಾದ ಸಮಸ್ಯೆಯಲ್ಲ, ಇದು ಒಂದು ಪ್ರಬಲವಾದ ರೋಗವಾದುದರಿಂದ ಪ್ರಬಲವಾದ ಚಿಕಿತ್ಸೆ ಬೇಕು ಎಂದು ಹೇಳಿದ್ದೇವೆ. ಇಂಥ ಒಂದು ಮೀಟಿಂಗ್ ಕರೆಯಬೇಕು ಎಂದೂ ಹೇಳಿದ್ದೇವೆ. ಅದರಂತೆ ಅವರು ಮೀಟಿಂಗ್ ಕರೆದಿದ್ದಾರೆ. ನಾವು ನಾಳಿದ್ದು ಹೋಗುತ್ತೇವೆ.

ಇಂದು ಏನು ಆರ್ಥಿಕ ಬಿಕ್ಕಟ್ಟು ಬಂದಿದೆ ಎಂದರೆ, ಆರ್ಥಿಕ ಬಿಕ್ಕಟ್ಟನ್ನು ಉಗ್ರವಾದ ಕ್ರಮವನ್ನು ತೆಗೆದುಕೊಂಡರೆ ಬಿಡಿಸುವುದಕ್ಕೆ ಸಾಧ್ಯ, ಇಲ್ಲದೆ ಹೋದರೆ ಬಿಡಿಸುವುದಕ್ಕೆ ಸಾಧ್ಯವಿಲ್ಲ. ರಾಜ್ಯ ಸರ್ಕಾರದಿಂದ ಇದು ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ಮಾಡಬೇಕು. ಕೇಂದ್ರ ಸರ್ಕಾರದವರು ಘಟ್ಟಿ ಮನಸ್ಸು ಮಾಡಿ 'ವೇಜ್ ಫ್ರೀಜ್, ಪ್ರಾಫಿಟ್ ಫ್ರೀಜ್, ಪ್ರೈಸ್ ಫ್ರೀಜ್'—ಈ ಮೂರನ್ನೂ ಮಾಡಿದರೆ ಆಗ ಹತೋಟಿ ಮಾಡಲಿಕ್ಕೆ ಬರುತ್ತದೆ. ಏನಾದರೂ ಒಂದು ಮಾರ್ಗ ನಮಗೆ ಇದರಿಂದ ಹೊರಗೆ ಹೋಗಲಿಕ್ಕೆ ಸಿಕ್ಕುತ್ತದೆ ಎನ್ನುವ ಅಭಿಪ್ರಾಯವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಬ್ಯಾಂಕುಗಳ ರಾಷ್ಟ್ರೀಕರಣ ವಿಚಾರವನ್ನು ಮಾತನಾಡುತ್ತಿದ್ದಾರೆ. ಬ್ಯಾಂಕುಗಳ ರಾಷ್ಟ್ರೀಕರಣ ಅಥವಾ ಜನರಲ್ ಇನ್‌ಷ್ಯೂರೆನ್ಸ್ ರಾಷ್ಟ್ರೀಕರಣ ಮಾಡುವುದರಿಂದ ಪ್ರೈಸ್ ಫ್ರೀಜ್, ವೇಜ್ ಫ್ರೀಜ್, ಪ್ರಾಫಿಟ್ ಫ್ರೀಜ್ ಮಾಡುವುದಾಗಲೀ ಆಗುವುದಿಲ್ಲ, ಯಾವುದೇ ಕೆಲಸವಾಗಲೀ ಆಗುವುದಿಲ್ಲ ಎಂದು ನನ್ನ ಖಂಡಿತವಾದ ಅಭಿಪ್ರಾಯವನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದುದರಿಂದ ಇಂದು ನನ್ನ ಬಜೆಟ್ಟಿನಲ್ಲಿ ಆ ವಿಚಾರದಲ್ಲಿ ನಾನು ಏನೂ ಹಾಕಿಲ್ಲ. ಒಂದು ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕೆಂದಿದ್ದೇನೆ. ಗಜೇಂದ್ರ ಗಡ್ಕರ್ ಕಮಿಷನ್ ರಿಪೋರ್ಟ ಪ್ರಕಾರ ಕೇಂದ್ರ ಸರ್ಕಾರದವರು ತುಟ್ಟಿ ಭತ್ಯವನ್ನು ಕೊಡುವುದಕ್ಕೆ ಒಪ್ಪಿಕೊಂಡರೆ ಅದರಂತೆಯೇ ನಾವೂ ಕೂಡ ಒಪ್ಪಿಕೊಳ್ಳುವ ಪ್ರಸಂಗ ಬರುತ್ತದೆ. ಇದು ಅನಿವಾರ್ಯವಾದ ಪ್ರಸಂಗ. ಹಾಗಾದರೆ ಒಟ್ಟು ನಾಲ್ಕನೆ ಯೋಜನೆಯಲ್ಲಿ ಈಗಾಗಲೆ ನಾವು ಕೊಟ್ಟಂಥ ತುಟ್ಟಿ ಭತ್ಯವನ್ನು ಹಿಡಿದು ರಾಜ್ಯ ಸರ್ಕಾರ 60 ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಬೇಕಾಗುತ್ತದೆ ಇದೇ ಬಾಬಿಗಾಗಿ. ಇಂಥ ಒಂದು ಪರಿಸ್ಥಿತಿ ಇದ್ದಾಗ ಕೇಂದ್ರ ಸರ್ಕಾರದವರು ಇದನ್ನು ಸಂಪೂರ್ಣವಾಗಿ ಪರ್ಯಾಲೋಚಿಸಿ ಒಂದು ನಿರ್ಧಾರಕ್ಕೆ ಬರಬೇಕು ಎಂದು ನಾನು ಆಶಯ ಮಾಡುತ್ತೇನೆ; ಮತ್ತು ಆ ನಿರ್ಧಾರಕ್ಕೆ ಬರಬೇಕು ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಫೈನಾನ್ಸ್ ಕಮಿಷನವರು ಐದು ವರ್ಷಕ್ಕೊಂದು ಸಲ ವರದಿ ಕೊಡುತ್ತಾರೆ. ಅದರ ಪ್ರಕಾರ ಕೇಂದ್ರ ಸರ್ಕಾರದವರು ನಮಗೆ ಸಹಾಯ ಕೊಡುತ್ತಾರೆ. ಈ ಐದು ವರ್ಷಗಳ ಅವಧಿಯಲ್ಲಿ ಹೀಗೆ ಉದ್ಭವವಾಗತಕ್ಕ ಅನೇಕ ಅನಿರೀಕ್ಷಿತವಾದ ಸಂದರ್ಭಗಳಲ್ಲಿ ರಾಜ್ಯ ಸರ್ಕಾರದವರು ನಿಸ್ಸಹಾಯಕರಾಗಿ ಕುಳಿತುಕೊಳ್ಳಬೇಕಾಗುವ ಪ್ರಸಂಗ ಬರುತ್ತದೆ. ಅದಕ್ಕಾಗಿ ಕೇಂದ್ರ ಸರ್ಕಾರದವರು ಒಂದು ನಿರ್ಧಾರ ಮಾಡಬೇಕೆಂದು ಪುನಃ ಪುನಃ ಹೇಳುತ್ತ ಬಂದಿದ್ದೇವೆ, ಈಗಲೂ ಕೂಡ ಹೇಳಲಿಕ್ಕೆ ಬಯಸುತ್ತೇನೆ.

(ಶ್ರೀ ರಾಮಕೃಷ್ಣ ಹೆಗಡೆ)

ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಗಮನದಲ್ಲಿಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಕೆಲವು ಜನ ಸದಸ್ಯರು ಹೇಳಿದರು ಬೇರೆ ಬೇರೆ ಬಾಬುಗಳಿಗೆ ಇನ್ನೂ ಹೆಚ್ಚು ಖರ್ಚು ಮಾಡಬೇಕು ಎಂದು. ಕೆಲವು ಜನ ಸದಸ್ಯರು ಹೇಳಿದರು ಸರ್ಕಾರಿ ಕರ್ಮಚಾರಿಗಳಿಗೆ ಇನ್ನೂ ಹೆಚ್ಚು ಅನುಕಂಪ ತೋರಿಸಬೇಕು ಎಂದು; ಮತ್ತು ಕೆಲವು ಸದಸ್ಯರು ಹೇಳಿದರು ನೀವು ಏಕೆ ಹೊಸ ಕರವನ್ನು ಹಾಕಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ, ಭೂಕಂದಾಯವನ್ನು ತೆಗೆದುಹಾಕಿ, ಅಗ್ರಿಕಲ್ಚರರ್ ಇನ್‌ಕಂಟ್ಯಾಕ್ಸ್ ಹಾಕಬೇಡಿ. ಯಾವುದೇ ತರಹ ಕರವನ್ನು ಹಾಕ ಕೂಡದು ಮತ್ತು ಸಾಲ ನಾವು ಮಾಡಕೂಡದು, ಸರ್ಕಾರವನ್ನು ನಡೆಸಬೇಕು, ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಬೇಕು ಎಂದೆಲ್ಲ ಹೇಳಿದರು. ಇದು ಹೇಗೆ ಸಾಧ್ಯ ಎಂದು ನಾನು ಕೇಳುತ್ತೇನೆ. ಭೂಕಂದಾಯವನ್ನು ಈಗಿರತಕ್ಕ ಸ್ವರೂಪದಲ್ಲಿ ತೆಗೆದುಹಾಕುತ್ತೇವೆ ಎಂದು ನಾನು ಈ ವರ್ಷದ ಬಜೆಟ್ಟಿನಲ್ಲಿ ಹೇಳಿದ್ದೇನೆ. ಅದಕ್ಕೆ ಬದಲಾಗಿ ಬೇರೆ ತರುತ್ತೇವೆ ಎಂದು ನಾನು ನಿರ್ದಿಷ್ಟವಾಗಿ ಹೇಳಿಲ್ಲ. ಭೂಕಂದಾಯದಿಂದ ನಮಗೆ ನಾಲ್ಕು ಕೋಟಿ ರೂಪಾಯಿ ಬರುತ್ತದೆ. ನಾಲ್ಕನೆಯ ಯೋಜನೆಯಲ್ಲಿ ಅದನ್ನು ನಮ್ಮ ರಿಸೋರ್ಸಸ್ ಆಗಿ ತೆಗೆದುಕೊಂಡಿದ್ದೇವೆ. ಅದನ್ನು ವಜಾ ಮಾಡಿದರೆ, ತತ್ವಶಃ ಒಪ್ಪಿಕೊಂಡರೂ ಕೂಡ ಅದರ ಬದಲಾಗಿ ಪ್ರತಿವರ್ಷ ನಾಲ್ಕೂವರೆ ಕೋಟಿ ರೂಪಾಯಿ ಬರತಕ್ಕ ಬೇರೆ ಬೇರೆ ಬಾಬನ್ನು ಹುಡುಕಬೇಕು, ಅದಿಲ್ಲದೆ ಹೋದರೆ ನಮ್ಮ ಯೋಜನೆಯನ್ನು ಮೊಟಕು ಮಾಡಬೇಕು. ಭೂಕಂದಾಯವನ್ನು ಬಿಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಬಿಹಾರದಲ್ಲಿ ಮಾಡಿದ್ದಾರೆ, ಮತ್ತೊಬ್ಬರು ಮಾಡಿದ್ದಾರೆ ಎನ್ನುವುದಲ್ಲ. ಇವರೆಲ್ಲರೂ ಮಾಡುವುದಕ್ಕೆ ಮೊದಲೇ 8 ತಿಂಗಳು, ಒಂದು ವರ್ಷ ಮೊದಲೇ ನಾವು ಈ ವಿಚಾರವನ್ನು ಯೋಚನೆ ಮಾಡಿದ್ದೇವೆ. ಭೂಕಂದಾಯವನ್ನು ಇಟ್ಟುಕೊಂಡರೆ ಅದರಿಂದ ಸ್ವಲ್ಪ ಮಟ್ಟಿಗೆ ಅನುಕೂಲ ಇದೆ. ಇನ್ನೊಂದು ದೃಷ್ಟಿಯಿಂದ ಅದು ಅಷ್ಟು ಸರಿಯಲ್ಲ. ಅದರಿಂದ ಅನುಕೂಲವೇನು ಎಂದರೆ ಪ್ರತಿಯೊಬ್ಬ ರೈತನಿಗೂ ತಾನು ಏನು ಕೊಡಬೇಕೆಂಬುದು ಗೊತ್ತು. ಕ್ಯಾನನ್ ಆಫ್ ಟ್ಯಾಕ್ಸೇಷನ್‌ನಲ್ಲಿ ಮುಖ್ಯವಾದ ಒಂದು ವಿಷಯವೇನೆಂದರೆ, ಯಾರು ಎಷ್ಟು ಕೊಡಬೇಕು ಎನ್ನುವುದು ಸಿದ್ಧಾಂತವಿರಬೇಕು ಭೂಕಂದಾಯದ ವಿಚಾರದಲ್ಲಿ ಈ ಬಗ್ಗೆ ಯಾರಿಗೂ ಸಂದೇಹವಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದ್ದವರು ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಕೊಡಬೇಕು ಕೊಡುವುದಕ್ಕೆ ಯಾರಿಗೂ ಶಕ್ತಿ ಇರುವುದಿಲ್ಲ. ಈಗ ಮೂರು ವರ್ಷಗಳ ಹಿಂದೆ ದಾವಣಗೆರೆ ಮಾರುಕಟ್ಟೆಯಲ್ಲಿ ಸೇಂಗಾ ಮಾರಾಟ ಎಷ್ಟಿತ್ತು, ಇವತ್ತು ಎಷ್ಟಿದೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಕಳೆದ ವರ್ಷ ಮೂರುವರೆ ಕೋಟಿ ರೂಪಾಯಿ ಸೇಂಗಾ ಮಾರಾಟವಾಗಿದೆ. ಮೂರು ನಾಲ್ಕು ವರ್ಷದ ಹಿಂದೆ, ಭದ್ರ ಯೋಜನೆ ಕೆಳಗೆ ಇನ್ನೂ ಅಭಿವೃದ್ಧಿಯಾಗದೆ ಇದ್ದಾಗ 75 ಲಕ್ಷ ರೂಪಾಯಿ ಸೇಂಗಾ ಮಾರಾಟವಾಗುತ್ತಿತ್ತು. ಇದು ಹೆಚ್ಚು ಉತ್ಪತ್ತಿಯಗುತ್ತಿದೆ ಎನ್ನುವುದನ್ನು ತೋರಿಸುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ (ಮೂಡಗೆರೆ).—ಅದರ ಬೆಲೆಯೂ ಕೂಡ ಜಾಸ್ತಿಯಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಒಂದಕ್ಕೊಂದು ಸಂಬಂಧಪಟ್ಟ ಮಾತು ಭೂಕಂದಾಯವನ್ನು ತೆಗೆದುಹಾಕಬೇಕು ಎನ್ನುವ ತತ್ವವನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಯಾವರೀತಿ ಮಾಡಬೇಕು, ಹೇಗೆ ಮಾಡಬೇಕು ಎನ್ನುವುದನ್ನು ಸರ್ಕಾರ ಪರಿಶೀಲಿಸುತ್ತಿದೆ. ಇದು ಈ ವರ್ಷದಿಂದ ಜಾರಿಗೆ ಬರುತ್ತದೆ ಎಂದು ನಾನು ಹೇಳಿಲ್ಲ. ಅದು ಜಾರಿಗೆ ಬರುವುದಾದರೆ ಮುಂದಿನ ವರ್ಷದಿಂದ ಜಾರಿಗೆ ಬರುತ್ತದೆ. ಇದರ ಬಗ್ಗೆ ನೇಮಕವಾಗಿದ್ದ ಕಮಿಟಿಯು ತನ್ನ ವರದಿಯನ್ನು ಕೊಟ್ಟಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅದರ ಬಗ್ಗೆ ಮಂತ್ರಿಮಂಡಲ ತೀರ್ಮಾನ ತೆಗೆದುಕೊಳ್ಳಬೇಕು. ಭೂಕಂದಾಯ ಮತ್ತು ಟ್ಯಾಕ್ಸೇಷನ್ ಇಲ್ಲದೆ, ಸಾಲ ತೆಗೆದುಕೊಳ್ಳದೆ ಪ್ರತಿಯೊಂದು ಬಾಬಿಗೂ ಹೆಚ್ಚು ಹೆಚ್ಚು ಖರ್ಚು ಮಾಡುತ್ತ ಸರ್ಕಾರವನ್ನು ನಡೆಸುವುದಕ್ಕೆ ಯಾರು ಬರುತ್ತಾರೆಯೋ ಗೊತ್ತಿಲ್ಲ, ಕೆಲವು ವರ್ಷಗಳ ನಂತರ ನೀವು ಬಂದರೂ ಕೂಡ ಆ ಮಾತನ್ನು ಅಲ್ಲಿ ಕುಳಿತುಕೊಂಡವರು ನಿಮಗೆ ಹೇಳಿದರೆ ಏನು ಮಾಡುತ್ತೀರಿ ? ಈಗ ಕೆಲವು ಕಡೆ ಕಾಂಗ್ರೆಸ್ಸೇತರ ಸರ್ಕಾರಗಳು ಬಂದಿವೆ. ಒಂದು ಮಾತನ್ನು ನಾನು ಇಲ್ಲಿ ಹೇಳಿದರೆ ಬಹುಶಃ ಅದು ಅಪ್ರಕೃತವಾಗಲಾರದು ಎಂದು ಭಾವಿಸುತ್ತೇನೆ. ಪ್ರತಿಯೊಬ್ಬ ಸದಸ್ಯರಿಗೂ ಎಷ್ಟು ಜವಾಬ್ದಾರಿ ಇದೆ ಎನ್ನುವುದನ್ನು ಎಂಫಸೈಸ್ ಮಾಡುವುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಬಿಹಾರದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಅನೇಕ ರೀತಿಯ ಪ್ರೋತ್ಸಾಹವನ್ನು ಕೊಟ್ಟರು;

ಈಗ ಯಾರು ಅಧಿಕಾರದಲ್ಲಿದ್ದಾರೆ ಆ ಪಕ್ಷದವರು. ಫೀಸ್ ಕೊಡಬೇಡಿ, ಪರೀಕ್ಷೆಗೆ ಹೋಗ ಬೇಡಿ ಎಂದು ಹೇಳಿದರು. ಮನುಷ್ಯನ ಮನಸ್ಸನ್ನು ಉದ್ರೇಕ (ಎಕ್ಸೈಟ್) ಗೊಳಿಸುವುದು ಬಹಳ ಸುಲಭ, ಒಳ್ಳೆಯ ಮಾರ್ಗದಲ್ಲಿ ತೆಗೆದುಕೊಂಡು ಹೋಗುವುದು ಬಹಳ ಕಷ್ಟ. ಇವತ್ತು ಅದೇ ಹುಡುಗರು, ಈಗಿನ ಸರ್ಕಾರದ ಮೇಲೆ ತಿರುಗಿ ಬಿದ್ದಿದ್ದಾರೆ, ಪರೀಕ್ಷೆ ಮಾಡದೆ ನಮಗೆ ಡಿಗ್ರಿ ಕೊಡಬೇಕು ಎಂದು ಅವರು ಹೇಳುತ್ತಿದ್ದಾರೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಶಾಶ್ವತವಾಗಿ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ನಾಳೆ ನೀವು ಇಲ್ಲಿ ಬರುವುದಿಲ್ಲ ಎಂದು ಕೂಡ ಹೇಳುವುದಿಲ್ಲ. ನಮ್ಮೆಲ್ಲರ ಲಕ್ಷ್ಯ ಏನಿರಬೇಕು, ನಮ್ಮೆಲ್ಲರ ಉದ್ದೇಶ ಏನಿರಬೇಕು ಎಂದರೆ, ನಮ್ಮ ದೇಶದ ಮತ್ತು ನಮ್ಮ ರಾಜ್ಯದ ಕಲ್ಯಾಣವಾಗಬೇಕು, ಏಳಿಗೆ ಆಗಬೇಕು. ನೀವು ಕೊಡುವ ಸೂಚನೆಗಳನ್ನು ನಾವು ಸ್ವಾಗತ ಮಾಡುತ್ತೇವೆ. ಅದುದರಿಂದ ನಾವು ಮಾತನಾಡುವಾಗ ಆ ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು, ಒಳ್ಳೆಯದನ್ನು ಹೇಳಿದರೆ ಒಳ್ಳೆಯದನ್ನು ಮಾಡುತ್ತಾರೆ ಎನ್ನುವುದನ್ನು ಗಮದಲ್ಲಿಟ್ಟುಕೊಂಡು ಮಾತನಾಡಬೇಕೆಂದು ತಮ್ಮ ಮುಖಾಂತರ ವಾಗಿ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ ನಾನು ಸಾಮಾನ್ಯವಾಗಿ ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರಗಳ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಎಲ್ಲಾ ಟೀಕೆಗಳಿಗೂ ಉತ್ತರ ಕೊಡುವುದಕ್ಕೆ ನಾನು ಪ್ರಯತ್ನ ಮಾಡಿಲ್ಲ. ಏಕೆಂದರೆ ಇವತ್ತಿನಿಂದಲೇ ಬೇರೆ ಬೇರೆ ಖಾತೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಚರ್ಚೆ ಪ್ರಾರಂಭವಾಗುತ್ತದೆ, ಆಗ ಆಯಾ ಖಾತೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ.

10-30 A.M.

ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಅದೇನೆಂದರೆ, ಪ್ರತಿ ವರ್ಷ ಒಳ್ಳೆಯ ಮಳೆಯಾಗಿ ಬೆಳೆ ಸರಿಯಾಗಿ ಆದರೆ ಬಹುಶಃ ಪರಿಸ್ಥಿತಿ ಸ್ವಲ್ಪ ಉತ್ತಮವಾಗಬಹುದು. 50 ವರ್ಷಗಳಿಂದ ರಷ್ಯಾ ರಾಜ್ಯದಲ್ಲಿ ಕ್ರಾಂತಿಯಾಗುತ್ತಿದ್ದರೂ ಅಲ್ಲಿ ಪ್ರಜಾಪ್ರಭುತ್ವ ಬರಲಿಲ್ಲ. ನಮ್ಮ ದೇಶದಲ್ಲಿ ಬಹುಶಃ 20—25 ವರ್ಷಗಳಲ್ಲಿ ಸುಖೀ ರಾಜ್ಯ ಬರಬಹುದು. ಖರ್ಚನ್ನು ಹಿಡಿತದಲ್ಲಿಟ್ಟು ಕೊಂಡರೆ ಮುಂದಿನ ವರ್ಷ ಅಷ್ಟು ಕಷ್ಟವಿರಲಿಕ್ಕಿಲ್ಲವೆಂದು ಆಶಿಸುತ್ತೇನೆ. ಈ ವರ್ಷದ ಪ್ಲಾನಿನಲ್ಲಿ ಮುಖ್ಯವಾಗಿ ನಾನ್-ಪ್ಲಾನ್ಡ್ ಎಕ್ಸ್‌ಪೆಂಡಿಚರಿನಲ್ಲಿ ಸರಕಾರ ಸುಮಾರು ಎರಡುಮುಕ್ಕಾಲು ಕೋಟಿ ರೂಪಾಯಿಗಳನ್ನು ಮಿತವ್ಯಯ ಮಾಡಬೇಕೆಂದು ನಿರ್ಧಾರ ಮಾಡಿದೆ. ಇದಕ್ಕೆ ಅನೇಕ ಕ್ರಮ ಕೈ ಕೊಳ್ಳುವುದಿದೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಆರ್ಗನೈಜೇಷನ್ನಿನಲ್ಲಿ ಇಂಡಸ್ಟ್ರಿಯಲ್ ಎಕ್ಸ್‌ಟೆನ್ ಷನ್ ಆಫೀಸರು, ಅನಿಮಲ್ ಹಸ್ಬೆಂಡ್ರಿ ಇಲಾಖೆ ಎಕ್ಸ್‌ಟೆನ್‌ಷನ್ ಆಫೀಸರು ಮತ್ತು ಸೋಷಿಯಲ್ ವೆಲ್‌ಫೇರ್ ಆರ್ಗನೈಜರ್—ಈ 3 ಹುದ್ದೆಗಳನ್ನು ವಜಾಮಾಡಬೇಕೆಂದಿದ್ದೇವೆ. ಹಾಗೆಯೇ ಡೆಪ್ಯುಟಿ ಬಿ. ಡಿ. ಒ. ಹುದ್ದೆಯನ್ನೂ ರದ್ದು ಮಾಡಬೇಕೆಂದಿದ್ದೇವೆ. ಈ ಸಂಬಂಧದಲ್ಲಿ ಸಂಪೂರ್ಣ ವಿವರಣೆ ಕೊಡುವುದಕ್ಕೆ ನಾನು ಬಯಸುವುದಿಲ್ಲ. ಯಾವುದು ಸಾಧಾರಣವಾಗಿ ನಿರುಪಯುಕ್ತ ಅಥವಾ ಯಾವು ದನ್ನು ರದ್ದು ಮಾಡುವುದರಿಂದ ಸರಕಾರದ ಕೆಲಸಕ್ಕೆ ಭಂಗ ಬರುವುದಿಲ್ಲ. ಅಂತ ಅನೇಕ ಹುದ್ದೆ ಗಳನ್ನು ಇಂದು ರದ್ದು ಮಾಡಬೇಕಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಿತವ್ಯಯ ಮಾಡುವುದಾಗಿ ಹೇಳುವಾಗ ಐ. ಜಿ. ಪಿ. ಕಾರಿಗೆ ಏರ್‌ಕಂಡೀಷನ್ ಮಾಡುವುದಕ್ಕೆ 75 ಸಾವಿರ ರೂಪಾಯಿಗಳು ಖರ್ಚು ಮಾಡಿರುವುದು ಸರ ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ನನಗೆ ಗೊತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಮಂತ್ರಿಗಳ ಸಂಖ್ಯೆಯನ್ನು ಕಡಮೆ ಮಾಡುವುದು ಮಿತವ್ಯಯದ ಕ್ರಮದಲ್ಲಿ ಸೇರಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಂತ್ರಿಗಳ ಸಂಖ್ಯೆ ಕಡಮೆ ಮಾಡಬೇಕೆಂದು ಪುನಃ ಪುನಃ ಹೇಳು ತ್ತಿದ್ದಾರೆ. ಒಟ್ಟು ಆಡಳಿತದ ಖರ್ಚು ಸುಮಾರು 60 ಕೋಟಿ ರೂಪಾಯಿಗಳಿದ್ದರೆ ಅದರಲ್ಲಿ ಸುಮಾರು 8 ರಿಂದ 10 ಲಕ್ಷ ರೂಪಾಯಿಗಳು ಮಂತ್ರಿಗಳಿಗೆ ಖರ್ಚಾಗಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಮಾರ್ಗದರ್ಶಕರಾಗಿ.

ಶ್ರೀ ರಾಮಕೃಷ್ಣ ಹೆಗಡೆ.—ಈ ಸಭೆಗೆ 216 ಸದಸ್ಯರೇಕೆ, ಕಡಮೆಮಾಡಿ ಎಂದು ಸಹ ಹೇಳ ಬಹುದು. ಮೇಲ್ಮನೆ ತೆಗೆಯಿರಿ ಎಂದು ಹೇಳಬಹುದು. ಈ ರೀತಿ ಹೇಳುತ್ತಿದ್ದರೆ ಅದರಿಂದ ಪ್ರಯೋ ಜನವಾಗುವುದಿಲ್ಲ. ಯಾವುದು ಕಾರ್ಯ ಸಾಧ್ಯವಾಗಿದೆಯೋ ಅದನ್ನು ವಿಚಾರ ಮಾಡಬೇಕು. ಈಗ

(ಶ್ರೀ ರಾಮಕೃಷ್ಣ ಹೆಗಡೆ)

ಅನೇಕ ಕ್ರಮಗಳನ್ನು ತೆಗೆದುಕೊಂಡು ಮಿತವ್ಯಯ ಮಾಡಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ. ಮತ್ತು ಇದರ ಜೊತೆಗೆ ಡಿವಿಜನಲ್ ಕಮಿಷನರ ಹುದ್ದೆ ರದ್ದುಮಾಡಬೇಕು ಎಂದು ಸಹ ಹೇಳಿದ್ದಾರೆ. ಈಗ ಈ ಹುದ್ದೆ ಇರುವುದು ಏಕೆಂದರೆ ಮುಖ್ಯವಾಗಿ ಅಧಿಕಾರದ ವಿಕೇಂದ್ರೀಕರಣವಾಗಬೇಕು ಎಂಬ ಉದ್ದೇಶದಿಂದ. ಇದರಿಂದ ಸಣ್ಣ ಪುಟ್ಟ ಕೆಲಸಗಳಿಗಾಗಿ ನೂರಾರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ದೂರ ಬರಬೇಕಿದ್ದು ತಪ್ಪುತ್ತದೆ. ಹತ್ತಿರದ ಜಿಲ್ಲೆಯಲ್ಲೇ ಅವನ್ನು ಇತ್ಯರ್ಥಮಾಡಿ ಕೊಳ್ಳಲು ಅನುಕೂಲವಾಗುತ್ತದೆ. ಈ ಉದ್ದೇಶದಿಂದ ಆ ಹುದ್ದೆಯನ್ನು ಇಡಲಾಗಿದೆ. ಈಗ ಡಿವಿಜನಲ್ ಕಮಿಷನರ ಹುದ್ದೆಯನ್ನು ಅದರ ಉದ್ದೇಶ ಸಫಲವಾಗಲಿಲ್ಲವೆಂಬ ಒಂದೇ ಕಾರಣದ ಮೇಲೆ ರದ್ದು ಮಾಡಬಹುದು. ಈಗ ಡಿವಿಜನಲ್ ಕಮಿಷನರಿಗೆ ಯಾವ ಅಧಿಕಾರ ಕೊಟ್ಟಿದ್ದೇವೆ ಅದು ಸಾಕೇ, ಸಾಲದೇ, ಅವರಿಗೆ ಸಾಕಷ್ಟು ಕೆಲಸವಿದೆಯೇ, ಇಲ್ಲವೇ ಎಂಬುದನ್ನು ನೋಡಬೇಕು. ಅದರಿಂದ ಉಪಯೋಗವಾಗದಿದ್ದರೆ ರದ್ದು ಮಾಡಬಹುದಾಗಿತ್ತು. ಕೊಟ್ಟಿರುವ ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ಬೋರ್ಡ್ ಆಫ್ ರೆವಿನ್ಯೂ ಇದೆ, ಡಿವಿಜನಲ್ ಕಮಿಷನರು ಮಾಡುವ ಕೆಲಸವನ್ನು ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಅಧಿಕಾರಿಗಳು ಮಾಡುತ್ತಿದ್ದಾರೆ. ಅಲ್ಲಿ ಕಮಿಷನರ್ ಫಾರ್ ಲೋಕಲ್ ಅಥಾರಿಟೀಸ್ ಎಂಬುವರಿದ್ದಾರೆ. ನಮ್ಮಲ್ಲಿ ಆ ರೀತಿ ಇಲ್ಲ. ಇದನ್ನು ಗಮನಿಸಿದರೆ ಡಿವಿಜನಲ್ ಕಮಿಷನರನ್ನು ತೆಗೆಯಬೇಕೆಂದು ಹೇಳುವುದು ಸರಿಯಲ್ಲ. ಈ ಬಜೆಟ್ ಸ್ವಲ್ಪ ಸರ್‌ಪ್ಲಸ್ ಬಜೆಟ್ಟಾಗಿ ಉಳಿಯಬಹುದು. ಅನಿರೀಕ್ಷಿತ ಘಟನೆಗಳಿಂದ ಬೇರೆ ಸಮಸ್ಯೆಗಳಿಂದ ತೊಂದರೆಯಾದರೆ ಅದನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರುತ್ತೇನೆ, ಆಗ ಸಪ್ಲಿಮೆಂಟರಿ ಬಜೆಟ್ ತರಬೇಕಾಗುತ್ತದೆ. ಇದುವರೆಗೆ ಮಾನ್ಯ ಸದಸ್ಯರು ಮುಖ್ಯವಾಗಿ ಹೇಳಿದ ವಿಚಾರಗಳಿಗೆ ಉತ್ತರಕೊಡಲು ಪ್ರಯತ್ನ ಮಾಡಿದ್ದೇನೆ. ಮಾನ್ಯ ಸದಸ್ಯರು ಅದನ್ನು ಬಹಳ ಗಮನವಿಟ್ಟು ಶಾಂತಿಯಿಂದ ಕೇಳಿ ಸಹಕಾರ ಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸೂಚಿಸಿ ಈ ಬಜೆಟ್ಟನ್ನು ಅವರು ಒಪ್ಪಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA.—The Hon'ble Finance Minister has very elaborately dealt with in broad outlines about the points raised in this House. With regard to the borrowing capacity he said that as laid down in the Constitution it is only an enabling provision.

Mr. SPEAKER.—It is because the word 'may' is used !

Sri H. SIDDAVEERAPPA.—The word ' may ', inmy humble opinion, has the force of ' shall '. The idea was that there should be always a limiting factor so that the State Governments should not go on incurring debts and also they should not themselves take that responsibility. There is one thing in this. Today we borrow debts. It is not we that repay. But there will be some others who have to repay. Supposing in a joint family if a *Kartha* does not manage the affairs properly, in a Court of Law it will be proved that there was mismanagement. It is from that point of view I should submit that it is a very healthy principle. I request the Hon'ble Finance Minister not to brush aside the suggestion, but to consider it very carefully. The very fact that no other State has followed and the Centre has not followed is no answer to my submission.

Mr. SPEAKER.—Where is the question of Centre not following the procedure ?

Sri H. SIDDAVEERAPPA.—Under Article 292 they have got some provision and under article 293 for the States. The fixation is only by the Parliament. It was said on a former occasion by the Finance Minister that neither the Parliament nor any State has followed the procedure

as laid down under Articles 292 and 293. When you come forward with a suggestion to raise a loan, at least, put a maximum limit within which you would like to barrow.

MR. SPEAKER.—I think this interpretation is more acceptable for the reason that the word 'must' cannot be there because the Constitution cannot provide that the State must borrow. That is why it is said like that and 'without it', means without the consent of the State Government. It is no bar. The two negatives there make an emphatic positive. In sub-clause (3), even without the permission of the Centre they cannot borrow when the debt is outstanding. That is the only clause relating to the State. Article 292 deals only with the Centre and not with the State and there the controlling power is of the Parliament, and it deals with the giving of the guarantees within such limits, if any, as may be so fixed. It deals with the borrowing power.

Article 293 says:

"(1) Subject to the provisions of this article, the executive power of a State extends to borrowing within the territory of India upon the security of the Consolidated Fund of the State within such limits, if any, as may from time to time be fixed by the Legislature of such State by law and to the giving of guarantees within such limits, if any, as may be so fixed."

Therefore the Centre does not come in at all.

"(2) The Government of India may, subject to such conditions as may be laid down by or under any law made by Parliament, make loans to any State or......"etc.

"(3) A State may not without the consent of the Government of India raise any loan if there is......"etc.

I believe this position will continue.

SRI H. SIDDAVEERAPPA.—I wanted an assurance from the Government that they would abide by the article which is the controlling factor so far as the borrowing capacity is concerned.

MR. SPEAKER.—Asking any Government to abide by the Constitution is something which I cannot understand.

†SRI H. SIDDAVEERAPPA.—I am asking for an assurance under article 293. I will leave it at that.

Then the Hon'ble Finance Minister was eloquent on industries. He gave us certain figures. I am glad the Industries Minister has come. I would like the Government to tell us when this Demand is taken up—after consideration they may please tell us, out of the 26 crores worth undertakings that are already in progress, when were they started, which are these concerns that were started and at what stage they are and whether they are generating any wealth or whether it has created any employment potential and likewise break up for this 26 crores.

†Indicates that the speeches or remarks have not been revised by the member concerned.

(SRI H. SIDDAVEERAPPA)

So far as the private sector is concerned, they may give similar information, whether these industries that have cropped up in the private sector are in progress, because my knowledge is, within the third plan period, so many factories have drawn their shutters. They are now closed and locked up. As far as I know, not less than 200 factories have closed during this period for various reasons. This break-up may be given so that we may know what exactly is our industrial position.

Another most important point is, there are so many public sector undertakings which we started from our own funds, the fruit canning industry, the tile factory and various others. I understand they are in the various stages of being sold out to others. What are the reasons; why they want to sell them? I also understand that the NGEF is also being considered likewise. There is a proposal to sell it to a foreign firm. My friends on the other side may say it is my imagination.

Sri S. NIJALINGAPPA (Chief Minister).—Imagination!

Sri H. SIDDAVEERAPPA.—I have got a third eye from which I can see things. Therefore I would like to know whether this information is correct. Because it is better the Government scotches these rumours even before such rumours spread wide. There is a rumour going about that there is an idea to sell away the NGEF to some foreign firm and that they have sought the permission of the Government of India. If it is not correct, please tell us so. We will be satisfied.

And then my friend said, we have spent a lot of money. We do not dispute their ability or capacity to spend money. That has been accepted. What is required is, as stated on page 16 of this book written by Dr. Lokanathan who is one of our economic experts—he says that progress cannot be measured in terms of the money spent.

Mr. SPEAKER.—Is the member raising a debate?

Sri H. SIDDAVEERAPPA.—I wanted a clarification, Sir. They say they have spent money. How much of it has been in concrete form so far as production is concerned. Money is no doubt spent. These facts may be clarified.

Mr. SPEAKER.—The Hon'ble Member is giving advance notice of these points so that they may be replied to under the appropriate Demand when it comes before the House.

Sri S. NIJALINGAPPA.—The Hon'ble Member was pleased to say in somewhat poetic language that 200 factories are closed and their 'shutters drawn'. Let him kindly give me a list of such factories.

Sri H. SIDDAVEERAPPA.—Sri Mallaradhya has said that.